

ಮಂಡ್ಯ ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯ ದೃಶ್ಯ. ವೇದಿಕೆ ಮೇಲೆ (ಎಡದಿಂದ ಬಲಕ್ಕೆ) ಶ್ರೀ ಶ್ರೀ ಶ್ರೀ ಶ್ರದ್ಧಾನಂದ ಮಹಾಸ್ವಾಮೀಜಿ, ಮುಫ್ತಿ ಮುಹಮ್ಮದ್ ಅಶ್ರಫ್ ಅಲಿ, ಡಾ॥ ಎಜಾಸುದ್ದೀನ್, ಎಂ.ಎಲ್.ಸಿ. ಹಾಗೂ ಫಾದರ್ ಜಾಕ್ರಿಯಾಸ್ ತಡತಿಲ್

---

ಒಬ್ಬ ಭಗವಂತನ ಸೃಷ್ಟಿ ನಾವು! ಒಬ್ಬನೇ ಮೂಲ ಪುರುಷನ (ಆದಂ) ಸಂತಾನ ನಾವು.
ಮತ್ತೇಕೆ ಈ ದ್ವೇಷ?
ಬನ್ನಿರಿ. ದ್ವೇಷ, ಅಸೂಯೆಯ ಗೋಡೆ ಬೀಳಿಸಿ, ಪ್ರೀತಿ ವಿಶ್ವಾಸದ ಹಾಡು ಹಾಡೋಣ!
ಬನ್ನಿರಿ. ಜಾತಿ, ಮತ, ಮೇಲು ಕೀಳನ್ನು ಬದಿಗಿಟ್ಟು ಹೊಸ ಸಮಾಜ ನಿರ್ಮಿಸೋಣ!
ಬನ್ನಿರಿ. ಧರ್ಮ ಸಂಕೀರ್ಣತೆ ಮತ್ತು ಮಾನವ ಶತ್ರುತ್ವದ ಗುಂಪುಗಳ ವಿರೋಧದಲ್ಲಿ ಹೊಸ ಸ್ವಾತಂತ್ರ್ಯದ ಡಿಂಡಿಮ ಬಾರಿಸೋಣ!
ಬನ್ನಿರಿ. ಅನ್ಯಾಯ, ಅಕ್ರಮ, ಅಧರ್ಮವನ್ನು ಅಳಿಸೋಣ ಮತ್ತು ನ್ಯಾಯ ನೀತಿ ಧರ್ಮಬದ್ಧ ಕಾನೂನನ್ನು ಸ್ಥಾಪಿಸೋಣ!!
(ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಏಕತೆ ಮತ್ತು ಸೌಹಾರ್ದತಾ ಯಾತ್ರೆಯ ಘೋಷಣೆಗಳು)

---


ವರದಿಗಾರರು:
ಖಾದ್ರಿ ಸೈಯದ್ ಮುಸ್ತಫಾ ರಿಫಾಯಿ ಜೀಲಾನಿ
ಕಾರ್ಯದರ್ಶಿ
ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕ
ಬೆಂಗಳೂರು-52

ಭಾಷಾಂತರ :
ಡಾ॥ ಮುಹಮ್ಮದ್ ಸಿಬ್ಗತುಲ್ಲಾ
ಪ್ರೊಫೆಸರ್, ಉರ್ದು ವಿಭಾಗ
ಸರ್ಕಾರಿ ಕಲಾ ಕಾಲೇಜು ಬೆಂಗಳೂರು-1


# ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಏಕತೆ ಮತ್ತು ಸೌಹಾರ್ದತಾ ಯಾತ್ರೆಯ ಸಂಕ್ಷಿಪ್ತ ವರದಿ

# CARAVAN FOR UNITY AND INTEGRITY

## BRIEF REPORT




ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್, ಕರ್ನಾಟಕ
ದಾರುಸ್ಸಲಾಂ ಬಿಲ್ಡಿಂಗ್, ಕ್ವೀನ್ಸ್ ರಸ್ತೆ, ಬೆಂಗಳೂರು - 560 052 ದೂರವಾಣಿ : 2264546



ಬೆಂಗಳೂರಿನ ವಿಧಾನಸೌಧದಿಂದ ಹೊರಡುತ್ತಿರುವ ಯಾತ್ರೆಯ ದೃಶ್ಯ



ಮೈಸೂರು ರ್‍ಯಾಲಿಯ ದೃಶ್ಯ : ಇದು 3 ಕಿ.ಮೀ. ಉದ್ದದ ರ್‍ಯಾಲಿ



ಮೈಸೂರು ಟೌನ್‌ಹಾಲ್ ಬಹಿರಂಗ ಸಭೆ ದೃಶ್ಯ: ವೇದಿಕೆ ಮೇಲೆ ಬಲದಿಂದ ಎಡಕ್ಕೆ ಬಷೀರ್ ಅಹಮದ್, ಅಡ್ವೊಕೇಟ್ ಪಾಜಿವಾದ್‌ರಿ ಸೈಯದ್ ಮುಸ್ತಫಾಯಿ, ಫಾದರ್ ರಾಯ್, ಮುಫ್ತಿ ಅಶ್ರಫ್ ಅಲಿ ಸಾಹೇಬ್ ಡಾ|| ವಿಜಾಉದ್ದೀನ್, ಎಂ.ಎಲ್.ಸಿ.

# ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕದ

# ಏಕತೆ ಮತ್ತು ಸೌಹಾರ್ದತಾ ಯಾತ್ರೆಯ

## ಸಂಕ್ಷಿಪ್ತ ವರದಿ

# CARVAN FOR UNITY AND INTEGRITY

## Brief report

ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕ
ದಾರುಸ್ಸಲಾಂ ಬಿಲ್ಡಿಂಗ್, ಕ್ವೀನ್ಸ್ ರೋಡ್, ಬೆಂಗಳೂರು **560 052**
ದೂರವಾಣಿ 2264546

A Brief Report of All India Milli Council-Karnataka's Caravan For Unity And Integrity, a translation of the Urdu original in Kannada by Dr. Mohammed Sibghatghulla, Professor in Urdu, Published by All India Milli Council, Karnataka, Darussalam Building, Queens Road, Bangalore-560 052; Phone: 2264546.

First Edition: 1996

No. of Pages: 24

ಮುಖಪುಟ ಚಿತ್ರ :
ಹಿರಿಯೂರಿನ ಬಹಿರಂಗ ಸಭೆ (ಎಡದಿಂದ ಬಲಕ್ಕೆ) ಮೌಲಾನ ಮುಫ್ತಿ ಅಶ್ರಫ್ ಆಲಿ
ಶ್ರೀ ಶ್ರೀ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು, ಫಕೀರ್ ಷಾಃ ಖಾದ್ರಿ
ಸೈಯದ್ ಮುಸ್ತಫಾ ರಿಫಾಯಿ ಜೀಲಾನಿ ಸಾಹೆಬ್

Printers:
**Lakshmi Mudranalaya**
5th Main Road, Chamarajpet
Bangalore-560 018
Phone: 6613123, 6618752

ಭಾರತ ದೇಶ ಸ್ವಾತಂತ್ರ್ಯ ಪಡೆದು 48 ವರ್ಷಗಳಾಯಿತು. ಈ ಅವಧಿಯಲ್ಲಿ ನಮ್ಮ ಪ್ರಗತಿ ನಿಜಕ್ಕೂ ಶ್ಲಾಘನೀಯ. ವಿಜ್ಞಾನದ ಹಾದಿಯಲ್ಲಿ, ಕೈಗಾರಿಕಾ ಕ್ಷೇತ್ರದಲ್ಲಿ, ಶೈಕ್ಷಣಿಕ ಗುಣಮಟ್ಟದಲ್ಲಿ, ಔದ್ಯೋಗಿಕ ಹಾಗೂ ವ್ಯವಸಾಯ ಉತ್ಪನ್ನಗಳಲ್ಲಿ ನಾವು ಜಗತ್ತಿನ ಬಹಳಷ್ಟು ದೇಶಗಳ ಸರಿಸಮಕ್ಕೆ ನಿಲ್ಲುವಷ್ಟು ಗರಿಮೆಯನ್ನು ಹೊಂದಿದ್ದೇವೆ. ಆದರೆ ಮಾನವೀಯ ಮೌಲ್ಯಗಳ ಮೌಲ್ಯಮಾಪನದ ಕಡೆ ಗಮನಹರಿಸಿದರೆ, ನಮ್ಮಲ್ಲಿದ್ದ ಪ್ರೀತಿ, ವಿಶ್ವಾಸ, ಕೋಮು ಸೌಹಾರ್ದತೆ, ಪರಸ್ಪರ ಧರ್ಮಗೌರವ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣಗಳೇನೇ ಇರಬಹುದು.

ಇದನ್ನು ಗುರುತಿಸಿ ಆಲ್ ಇಂಡಿಯಾ ಮಿಲ್ಲಿಕೌನ್ಸಿಲ್ 13ನೇ ಆಗಸ್ಟ್ 1995ರ ತನ್ನ ಕಾರ್ಯಕಾರಿ ಸಮಿತಿಯಲ್ಲಿ ಮುಸ್ಲಿಂ ಬಾಂಧವರಲ್ಲಿ ಏಕತೆ ಮತ್ತು ಜಾಗ್ರತೆಯನ್ನು ತರಲು, ದೇಶಬಾಂಧವರ ಜೊತೆಯಲ್ಲಿ ಏಕತಾ ಹಾಗೂ ಸೌಹಾರ್ದತೆಯ ಸಂಬಂಧಗಳನ್ನು ಮತ್ತಷ್ಟು ಬಲ ಪಡಿಸಲು, ದೇಶದಲ್ಲಿ ಹರಡಿಕೊಂಡಿರುವ ಅಸೂಯೆ, ದ್ವೇಷ, ಗಲಭೆಯ ಬದಲಾಗಿ ಪ್ರೇಮ, ಶಾಂತಿಯ ವಾತಾವರಣವನ್ನು ಬೆಳೆಸಲು, ಧಾರ್ಮಿಕ, ವಂಶ ಪಕ್ಷಪಾತದ ಬದಲಾಗಿ ಮಾನವೀಯತೆ ಹಾಗೂ ಧಾರ್ಮಿಕ ಹಿತಚಿಂತನೆಯ ವಾತಾವರಣವನ್ನು ಕಲ್ಪಿಸಲು, ಭಾರತ ದೇಶದ ಎಲ್ಲಾ ರಾಜ್ಯಗಳಲ್ಲಿ ಏಕತೆ ಮತ್ತು ಸೌಹಾರ್ದತೆ, ಸ್ವಧರ್ಮನಿಷ್ಠೆ, ಪರಧರ್ಮಸಹಿಷ್ಣುತೆ, ಸಹಬಾಳ್ವೆಯ ಪ್ರೇಮ ಸಂದೇಶವನ್ನು ಮನುಕುಲಕ್ಕೆ ಮುಟ್ಟಿಸಲು ತೀರ್ಮಾನಿಸಲಾಯಿತು. ಈ ನಿರ್ಧಾರದ ಮೇರೆಗೆ ಅಕ್ಟೋಬರ್‌ನಿಂದ ಡಿಸೆಂಬರ್ 95ರ ವರೆಗೆ ಅನೇಕ ರಾಜ್ಯಗಳಲ್ಲಿ ಯಾತ್ರೆಗಳು ಹೊರಟವು. ಆಲ್ ಇಂಡಿಯಾ ಮಿಲ್ಲಿಕೌನ್ಸಿಲ್ ಕರ್ನಾಟಕವೂ ಸಹ 13-16 ಡಿಸೆಂಬರ್ ಬೆಂಗಳೂರಿಂದ ಬೆಳಗಾಂವರೆಗೆ ಆರು ಜಿಲ್ಲೆಗಳ ಯಾತ್ರೆ ನಡೆಸಿತು. ಇದರ ಮೊದಲ ಹಂತದ ಸಂಕ್ಷಿಪ್ತ ವರದಿ ಇಲ್ಲಿದೆ. ಮುಂದೆ ಕರ್ನಾಟಕ ರಾಜ್ಯದ ಉಳಿದ ಜಿಲ್ಲೆಗಳ ಯಾತ್ರೆ ಮಾಡಿ ಮುಗಿಸುವ ಯೋಜನೆ ಸಿದ್ಧವಾಗಿದೆ.

### 13-12-95: ಬೆಂಗಳೂರಿಂದ ಮೈಸೂರಿನವರೆಗೆ

ಆಲ್ ಇಂಡಿಯಾ ಮಿಲ್ಲಿಕೌನ್ಸಿಲ್ ಕರ್ನಾಟಕದ ಏಕತಾ ಮತ್ತು ಸೌಹಾರ್ದತೆಯ ಈ ಯಾತ್ರೆ 13-12-95ರ ಬೆಳಗ್ಗೆ 8-30ಕ್ಕೆ ಸರಿಯಾಗಿ ಬೆಂಗಳೂರಿನ ವಿಧಾನಸೌಧದಿಂದ ಹೊರಟಿತು. ಸೈಯದ್ ವಂಶದ ಆಲಿಜನಾಬ್ ಆಲ್‌ಹಾಜ್‌ಸೈಯದ್ ಮುಹಮ್ಮದ್ ಬೇರಿ

ಸಾಹೇಬರು ಬಿಳಿ ಬಾವುಟ ತೋರಿಸಿ ಯಾತ್ರೆಯ ಶುಭಾರಂಭ ಮಾಡಿದರು. ಯಾತ್ರೆ ಹೊರಡುವ ಮುನ್ನ ಯಾತ್ರೆಯ ಮುಖ್ಯಸ್ಥರಾದ ಹಜ್‌ರತ್ ಮೌಲಾನ ಮುಫ್ತಿ ಮುಹಮ್ಮದ್ ಅಶ್ರಫ್ ಅಲಿ ಸಾಹೇಬರು (ಜನರಲ್ ಸೆಕ್ರೆಟರಿ , ಮಿಲ್ಲಿ ಕೌನ್ಸಿಲ್ ಕರ್ನಾಟಕ) ಪ್ರಾರ್ಥನೆ ಮಾಡಿದರು. ಈ ಸಂದರ್ಭದಲ್ಲಿ ನಗರದ ಗಣ್ಯ ಹಾಗು ವಿಭಿನ್ನ ಸಂಸ್ಥೆಗಳ ಮುಖ್ಯಸ್ಥರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಾರ್ಥನೆಯಲ್ಲಿ ಪಾಲುಗೊಂಡು ತುಂಬಿದ ಕಣ್ಣೀರಿಂದ 'ಯಾಚನೆಯಲ್ಲಿ ಆಮೀನ್' ಎಂದರು. ಈ ಯಾತ್ರೆಯಲ್ಲಿ 35 ಸೀಟುಳ್ಳ ಒಂದು ಬಸ್ ಹಾಗೂ ಅನೇಕ ಸಂಖ್ಯೆಯಲ್ಲಿ ಕಾರುಗಳು ಇದ್ದವು. ಮಿಲ್ಲಿ ಕೌನ್ಸಿಲ್ ಕರ್ನಾಟಕದ ಪದಾಧಿಕಾರಿಗಳು ಹಾಗೂ ಸದಸ್ಯರು ಭಾಗವಹಿಸಿದ್ದರು. ಉದಾಹರಣೆಗೆ ಜನಾಬ್ ಇಬ್ರಾಹೀಂ ಖಲೀಲುಲ್ಲಾ ಖಾನ್ (ಕಾರ್ಯದರ್ಶಿ, ಮಿಲ್ಲಿ ಕೌನ್ಸಿಲ್ ಕರ್ನಾಟಕ) ಜನಾಬ್ ಎಂ. ಬಷೀರ್ ಅಹ್ಮದ್, ಅಡ್ವೊಕೇಟ್ (ಕಾರ್ಯದರ್ಶಿ, ಲೀಗಲ್ ಸೆಲ್, ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್) ಜನಾಬ್ ಮಸೂದ್ ಅಬ್ದುಲ್ ಖಾದರ್ (ಕಾರ್ಯದರ್ಶಿ, ಮಿಲ್ಲಿ ಕೌನ್ಸಿಲ್ ಕರ್ನಾಟಕ) ಜನಾಬ್ ಫೈರೋಜ್ ಅಬ್ದುಲ್ಲಾ ಸೇಠ್ (ಖಜಾಂಚಿ, ಮಿಲ್ಲಿ ಕೌನ್ಸಿಲ್ ಕರ್ನಾಟಕ) ಜನಾಬ್ ಸೈಯದ್ ಶಾಹಿದ್ (ಸದಸ್ಯರು, ಮಿಲ್ಲಿ ಕೌನ್ಸಿಲ್ ಕರ್ನಾಟಕ) ಮೌಲಾನಾ ಮುಹಮ್ಮದ್ ವಲಿಯುಲ್ಲ ರಿಶಾದಿ ಸಾಹೆಬ್ ವಾಣಂಬಾಡಿ ಮತ್ತು ಮೌಲಾನ ಮುಹಮ್ಮದ್ ಅಯ್ಯೂಬ್ ರಹ್‌ಮಾನಿ ಸಾಹೆಬ್ ಗುಡಿಯಾತ್ತಂ ಇವರು ಭಾಗವಹಿಸಿ ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ತಮಿಳುನಾಡನ್ನು ಪ್ರತಿನಿಧಿಸಿದ್ದರು. ಬೆಂಗಳೂರು ಹಾಗೂ ರಾಜ್ಯದ ಸುಪ್ರಸಿದ್ಧ ವ್ಯಕ್ತಿ ಡಾ॥ ವಿಜಾಸುದ್ದೀನ್ ಅಶ್ರಫಿ, ಎಂ.ಎಲ್.ಸಿ. ರವರೂ ಸಹ ಪ್ರಾರಂಭದಿಂದ ಅಂತ್ಯದವರೆಗೂ ಯಾತ್ರೆಯಲ್ಲಿ ಭಾಗವಹಿಸಿದ್ದರು.

### ರಾಮನಗರಂ

ಈ ಶುಭಯಾತ್ರೆ ಬೆಳಗ್ಗೆ 9-30ಕ್ಕೆ ರಾಮನಗರಂ ತಲುಪಿತು. ರಾಮನಗರದ ನಾಗರೀಕರು ಈ ಯಾತ್ರೆಯನ್ನು ಸ್ವಾಗತಿಸಿ, ರಾಮನಗರದ ಮಧ್ಯದಲ್ಲಿ ಬಹಿರಂಗ ಸಭೆ ಏರ್ಪಡಿಸಿದ್ದರು. ಹಾಜಿ ಸೈಯದ್ ಮುನೀರ್ ಸಾಹೇಬರು ಸ್ವಾಗತ ಭಾಷಣ ಮಾಡಿದರು. ಮೌಲಾನ ಮುಹಮ್ಮದ್ ಅಶ್ರಫ್ ಅಲಿರವರು ಉರ್ದು ಭಾಷೆಯಲ್ಲಿ, ಡಾ॥ ವಿಜಾಸುದ್ದೀನ್‌ರವರು ಕನ್ನಡದಲ್ಲಿ ಭಾಷಣ ಮಾಡಿ, ದೇಶದ ಈಗಿನ ವಾತಾವರಣದಲ್ಲಿ ಏಕತೆ ಮತ್ತು ಸೌಹಾರ್ದತೆಯ ಆವಶ್ಯಕತೆ ಹಾಗೂ ಅದರ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸಿ, ಯಾತ್ರೆಯ ಉದ್ದೇಶವನ್ನು ಬಹಿರಂಗ ಸಭೆಯ ಮುಂದಿಟ್ಟರು. ಮೌಲಾನ ಅಶ್ರಫ್ ಅಲಿ ಸಾಹೇಬರು ಮುಸ್ಲಿಂ ಬಾಂಧವರಲ್ಲಿ ಶಾಂತಿ ಮತ್ತು ಶಿಸ್ತನ್ನು ಕಾಪಾಡಲು ಕರೆ ಕೊಟ್ಟರು. ಏಕೆಂದರೆ ಶಾಂತಿ ಇಸ್ಲಾಂ ಧರ್ಮದ ಬುನಾದಿ, ಅದು ಶಾಂತಿ ಮತ್ತು ಸುರಕ್ಷತೆಯ ಧರ್ಮ,



ಮನಗಳಲ್ಲಿ ಏನೂ ಭೇದಭಾವ ಇಟ್ಟುಕೊಳ್ಳದೆ ದೇಶ-ಬಾಂಧವರೊಡನೆ ನಿಮ್ಮ ಸಂಪರ್ಕ ಬೆಳೆಸಿ ಎಂದು ಕರೆಕೊಟ್ಟರು. ಡಾ॥ ವಿಜಾಸುದ್ದೀನ್‌ರವರು ಮಾತನಾಡಿ, ನಮ್ಮದು ಅನೇಕ ಧರ್ಮಗಳ, ವಂಶಗಳ ಹಾಗೂ ಭಾಷೆಗಳ ದೇಶ. ಈ ದೇಶವನ್ನು ವ್ಯಕ್ತಿಗತ ಸ್ವಾತಂತ್ರ್ಯದ ವಿರೋಧಿ ಸಿದ್ಧಾಂತಗಳ ಚಟುವಟಿಕೆಗಳಿಂದ ಕಾಪಾಡಲು ಮುಸ್ಲಿಮರು ಒಗ್ಗಟ್ಟಾಗಿ ಮೈದಾನದಲ್ಲಿ ಬಂದು ಇಡೀ ದೇಶವನ್ನು ಶಾಂತಿ ಮತ್ತು ಸೌಹಾರ್ದತೆಯ ತೊಟ್ಟಿಲನ್ನಾಗಿ ಮಾಡಲು ಕರೆ ನೀಡಿದರು. ಜನಾಬ್ ಖಲೀಲ್ ಅಹ್ಮದ್, ಮಾಜಿ ಕೌನ್ಸಿಲರ್‌ರವರ ವಂದನಾರ್ಪಣೆಯ ನಂತರ ಸಭೆ ಮುಕ್ತಾಯಗೊಂಡಿತು.

### ಚನ್ನಪಟ್ಟಣ

10-30ಕ್ಕೆ ಸರಿಯಾಗಿ ಯಾತ್ರೆ ಚನ್ನಪಟ್ಟಣ ತಲುಪಿತು. ಇಲ್ಲಿಯ ನಾಗರೀಕರು ಸಾತನೂರ್ ಸರ್ಕಲ್‌ನಿಂದ ಮದೀನ ಸರ್ಕಲ್‌ವರೆಗೆ ರ್‍ಯಾಲಿಯ ಏರ್ಪಾಡು ಮಾಡಿದ್ದರು. ಮದೀನ ಸರ್ಕಲ್‌ನಲ್ಲಿ ಈ ರ್‍ಯಾಲಿ ಬಹಿರಂಗ ಸಭೆಯಾಯಿತು. ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಜನಾಬ್ ಇಬ್ರಾಹಿಂ ಖಲೀಲುಲ್ಲಾರವರು "ದೇಶದಲ್ಲಿ ಫ್ಯಾಸಿಸ್ಟ್ ಶಕ್ತಿಗಳು ಭಯಂಕರ ವಾತಾವರಣ ಕಲ್ಪಿಸಲು ಪ್ರಯತ್ನಿಸುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. ಮುಸ್ಲಿಂ ಬಾಂಧವರು ಇತರ ದೇಶ ಬಾಂಧವರನ್ನು ತಮ್ಮ ಜೊತೆಯಲ್ಲಿ ತೆಗೆದುಕೊಂಡು ಇದರ ವಿರುದ್ಧ ಹೋರಾಟ ನಡೆಸಬೇಕಾಗಿದೆ. ನಮ್ಮ ದೇಶದ ಶಾಂತಿಯನ್ನು ಕಾಪಾಡುವುದು, ಅದನ್ನು ಅಶಾಂತಿಯಿಂದ ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯ " ಎಂದು ಹೇಳಿದರು. ಮೌಲಾನ ಮುಹಮ್ಮದ್ ಅಶ್ರಫ್ ಅಲಿರವರು ಮಾತನಾಡಿ "ಮುಸ್ಲಿಂ ಬಾಂಧವರು ತಮ್ಮಲ್ಲಿರುವ ಸಣ್ಣಸಣ್ಣ ಭೇದಭಾವಗಳನ್ನು ಮರೆತು ದೇಶ ಮತ್ತು ದೇಶಬಾಂಧವರ ಬಗ್ಗೆ ಯೋಚಿಸಿ" ಎಂದರು. ಡಾ॥ ವಿಜಾಸುದ್ದೀನ್‌ರವರು ಕನ್ನಡದಲ್ಲಿ ಭಾಷಣ ಮಾಡಿ, "ನಮ್ಮ ದೇಶ ಅನೇಕ ಧರ್ಮಗಳ ಸಂಘಟನೆಯಾಗಿರುವುದರಿಂದ ಇಲ್ಲಿ ಧಾರ್ಮಿಕ ಹಿತಚಿಂತನೆಯ ವಾತಾವರಣವನ್ನು ಕಲ್ಪಿಸಿ ಒಬ್ಬರೊಬ್ಬರನ್ನು ಮರ್ಯಾದಿಸಿ" ಎಂದರು. ಹಜ್‌ರತ್ ಶೈಖುಲ್ ಮಶಾಯಿಖ್ ಯಾಖೂಬ್ ಖಾಸ್ಮಿ ಸಾಹೆಬ್ ಕಾರವಾನನ್ನು ಸ್ವಾಗತಿಸಿ, ಯಾತ್ರೆಯ ಸದುದ್ದೇಶಗಳನ್ನು ಮೆಚ್ಚಿ ಅದರ ಗುಣಗಾನ ಮಾಡಿದರು. ಪ್ರೀತಿ ಪ್ರೇಮ, ಮತ್ತು ಸೋದರತೆ, ಏಕತೆಯ ಅಪ್ರತಿಮ ಸಂದೇಶವನ್ನು ತೆಗೆದುಕೊಂಡು ಹೊರಟಿರುವ ಮಿಲ್ಲಿ ಕೌನ್ಸಿಲ್‌ನ ಈ ಯಾತ್ರೆ ಬಲು ಭಾಗ್ಯಶಾಲಿ ಎಂದರು. ಮಹದವಿಯ ಸಂಘ ವುಡ್ ಹ್ಯಾಂಡಿಕ್ರಾಫ್ಟ್ ಮತ್ತು ಮರ್ಚೆಂಟ್ ಅಸೋಸಿಯೇಷನ್‌ನವರಿಂದ ಯಾತ್ರೆಯಲ್ಲಿ ಭಾಗವಹಿಸಿದ್ದವರಿಗೆಲ್ಲ ಮಾಲಾರ್ಪಣೆ ಮಾಡಲಾಯಿತು.

## ಮಂಡ್ಯ

ಈ ಶುಭ ಕಾರವಾನ್ 11-45ಕ್ಕೆ ಮಂಡ್ಯ ತಲುಪಿತು. ಮಂಡ್ಯ ನಾಗರೀಕರು ರ‍್ಯಾಲಿ ವ್ಯವಸ್ಥೆ ಮಾಡಿದ್ದರು. ರ‍್ಯಾಲಿ ಏಕತಾ ಮತ್ತು ಸೌಹಾರ್ದತೆಯ ಹಾಡುಗಳನ್ನು ಹಾಡುತ್ತ, ಘೋಷಣೆಗಳನ್ನು ಕೂಗುತ್ತ ಹೆದ್ದಾರಿ ಮಾರ್ಗವಾಗಿ ಸಿಲ್ವರ್ ಜ್ಯೂಬಿಲಿ ಪಾರ್ಕ್ ತಲುಪಿ ಬಹಿರಂಗ ಸಭೆಯಾಯಿತು. ಇದರಲ್ಲಿ ಹಿಂದೂ, ಮುಸ್ಲಿಂ, ಸಿಖ್, ಕ್ರೈಸ್ತ, ಪಾರಸಿ ಹಾಗೂ ದಲಿತರೆಲ್ಲರೂ ಭಾಗವಹಿಸಿದ್ದರು. ಎಲ್ಲ ಧರ್ಮಗಳ, ಸಾಮಾಜಿಕ ಮತ್ತು ರಾಜಕೀಯ ಪಕ್ಷಗಳ ಸಂಸ್ಥೆಗಳ ಮಾರ್ಗದರ್ಶಕರು, ನಿರ್ದೇಶಕರು ಮತ್ತು ನಾಯಕರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಆದಿಚುಂಚನಗಿರಿಯ ಶ್ರೀ ಶ್ರೀ ಶ್ರೀ ಶ್ರದ್ಧಾನಂದ ಸ್ವಾಮೀಜಿ, ಈ ರಾಜ್ಯದ ಮಹಾಸ್ವಾಮಿಗಳು, ಅವರ ಭಕ್ತಾದಿಗಳು ಲಕ್ಷಾಂತರ ಸಂಖ್ಯೆಯಲ್ಲಿ ಸ್ವತಃ ಈ ಬಹಿರಂಗ ಸಭೆಗೆ ಆಗಮಿಸಿದ್ದರು. ಮೌಲಾನ ಮುಹಮ್ಮದ್ ಲುತ್ಫುಲ್ಲಾ ರಿಷಾದಿ (ಕಾರ್ಯದರ್ಶಿ, ಮಿಲ್ಲಿ ಕೌನ್ಸಿಲ್ ಮಂಡ್ಯ) ಅವರು ಸಭಿಕರನ್ನು ಸ್ವಾಗತಿಸಿದರು. ಡಾ॥ ವಿಜಾಸುದ್ದೀನ್ ಸಾಹೇಬರು ಮಾತನಾಡಿ ''ಮಾನವರ ದೇಹಗಳಲ್ಲಿ ಹರಿಯುತ್ತಿರುವ ರಕ್ತವೆಲ್ಲ ಒಂದೇ ಬಣ್ಣ ಹೊಂದಿದೆ. ಎಲ್ಲರ ಜನ್ಮ ಒಂದೇ ರೀತಿಯಲ್ಲಿ ಆಗಿದೆ. ಇದರಲ್ಲಿ ಭೇದ ಭಾವ ಹಾಗೂ ಅಸ್ಪೃಶ್ಯತೆಗೆ ಯಾವ ಅವಕಾಶವೂ ಇಲ್ಲ. ನಾವೆಲ್ಲರೂ ಸೇರಿ ಒಂದು ಒಳ್ಳೆಯ ಸಮಾಜ ನಿರ್ಮಿಸಬೇಕೆಂದರೆ ಎಲ್ಲರಿಗೂ ಸಮನಾದ ಹಕ್ಕು ಮತ್ತು ಸಮಾನತೆ ಇರಬೇಕು. ಇದೇ ಈ ಕಾರವಾನಿನ ಸಂದೇಶ'' ಎಂದರು. ಜನಾಬ್ ಬಷೀರ್ ಅಹ್ಮದ್ ಅಡ್ವೊಕೇಟ್‌ರವರು ಮಾತನಾಡಿ, ''ಈ ದೇಶದಲ್ಲಿ ಮಾನವ ಶತ್ರುತ್ವ ಬೆಳೆಯುತ್ತಿದೆ. ಈ ವಾತಾವರಣ ನಾಶಮಾಡಿ, ಕಾನೂನಿನ ಶ್ರೇಷ್ಠತೆಯನ್ನು ಖಾಯಂಗೊಳಿಸಬೇಕು. ಇವೆಲ್ಲ ಸಾಧ್ಯವಾಗಬೇಕಾದರೆ ಜನಸಮೂಹ ಸರ್ಕಾರದೊಂದಿಗೆ ಸಹಕರಿಸಬೇಕು. ಸರ್ಕಾರದ ಯಂತ್ರ ಮತ್ತು ಪ್ರಜೆಗಳು ಇಬ್ಬರೂ ಸೇರಿ ದೇಶದಲ್ಲಿ ಒಳ್ಳೆಯ ವಾತಾವರಣ ಕಲ್ಪಿಸುವುದರ ಮೂಲಕ, ಯಾರ ಮೇಲೆಯೂ ಅತ್ಯಾಚಾರ ಆಗದಂತೆ ಜಾಗ್ರತೆಯನ್ನು ಮೂಡಿಸಬೇಕೆಂದೇ ಈ ಕಾರವಾನ್ ಇಡೀ ದೇಶದಲ್ಲಿ ಯಾತ್ರೆ ಹೋಗುತ್ತಿದೆ ಮತ್ತು ಇಂದು ನಿಮ್ಮ ಪಟ್ಟಣಕ್ಕೆ ಆಗಮಿಸಿದೆ'' ಎಂದರು. ಸರ್ವೋದಯ ನಾಯಕರಾದ ಶ್ರೀ ಸುರೇಂದ್ರಕೂಳಗಿ ಮತ್ತು ಬ್ರಹ್ಮಸಮಾಜದ ಬ್ರಹ್ಮಕುಮಾರಿ ಲಕ್ಷ್ಮಿ, ರೆವರೆಂಡ್ ಫಾದರ್ ಕೋಲಾಸೋ, ಬಹುಜನ ಸಮಾಜ ಪಕ್ಷದ ಅಧ್ಯಕ್ಷರಾದ ಪುರುಷೋತ್ತಂ ಲಿಂಗಯ್ಯ, ಸ್ವಾತಂತ್ರ್ಯ ಹೋರಾಟಗಾರ ಶ್ರೀ ಜವರಪ್ಪಗೌಡ ಮತ್ತಿತರ ಎಲ್ಲ ಮುಸ್ಲಿಂ ನಾಯಕರು ಕನ್ನಡ ಭಾಷಣಗಳನ್ನು ಮಾಡಿದರು. ಇದರ ಸಾರಾಂಶ '' ಈ ದೇಶಕ್ಕೆ ಎಲ್ಲರೂ ಸೇರಿ ಬಲಿದಾನ ಹಾಗೂ ತ್ಯಾಗ ಮಾಡಿ ಸ್ವಾತಂತ್ರ್ಯ ಗಳಿಸಿ ಕೊಟ್ಟರು. ಆದರೆ ಸ್ವಾತಂತ್ರ್ಯ ಪಡೆದ ನಂತರ ಅನ್ಯಾಯಗಳಾಗುತ್ತಿವೆ, ಜಗಳಗಳೂ ನಡೆಯುತ್ತಿವೆ. ಈ ವಾತಾವರಣ ಬದಲಾಯಿಸದೇ ಇದ್ದರೆ ನಮ್ಮ ಸ್ವಾತಂತ್ರ್ಯಕ್ಕೆ ಅರ್ಥವೇ ಇಲ್ಲ. ಹಿಂದು, ಮುಸ್ಲಿಂ, ಸಿಖ್, ಕ್ರೈಸ್ತ, ಪಾರ್ಸಿ, ಹರಿಜನ ಎಲ್ಲರೂ ಒಗ್ಗಟ್ಟಾಗಿ, ಇದರ ವಿರುದ್ಧ ಒಂದು



ಹೊಸಯುದ್ಧ ಮಾಡಬೇಕಾಗಿದೆ. ಎಲ್ಲಿಯವರೆಗೆ ದೇಶದಲ್ಲಿ ಶಾಂತಿ ಇರುವುದಿಲ್ಲವೋ ಅಲ್ಲಿಯವರೆಗೆ ದೇಶ ಅಭಿವೃದ್ಧಿ ಪಡೆಯಲು, ಸುರಕ್ಷಿತವಾಗಿರಲು ಸಾಧ್ಯವಿಲ್ಲ. ಇದಕ್ಕಿಂತ ಮುಖ್ಯವಾಗಿ ನಾವೆಲ್ಲರೂ ನಮ್ಮಲ್ಲಿರುವ ತಪ್ಪು ಭಾವನೆಗಳನ್ನೆಲ್ಲ ದೂರ ಮಾಡಿ ಧಾರ್ಮಿಕ ಸಮಾನತೆಯ ಮೇಲೆ ಖಾಯಂ ಆಗಿ ಕೆಲಸ ಮಾಡಬೇಕಾಗಿದೆ. ಅದನ್ನು ಪ್ರೋತ್ಸಾಹಿಸಬೇಕಾಗಿದೆ''. ಈ ರಿಫಾಯಿ ಫಕೀರ್ ತಮ್ಮ ಭಾಷಣದಲ್ಲಿ ''ಮುಸ್ಲಿಂ ಬಾಂಧವರೆಲ್ಲರೂ ತಮ್ಮ ಸಣ್ಣ ಸಣ್ಣ ಭೇದ ಭಾವಗಳನ್ನು ಮರೆತು ಕಲ್ಲಿನ ಬುನಾದಿಯ ಮೇಲೆ ಸೀಸತುಂಬಿದ ಗೋಡೆಯ ಹಾಗೆ ಒಗ್ಗಟ್ಟಾಗಿರಬೇಕು. ಈ ಮಾತನ್ನು ನೀವು ಜ್ಞಾಪಕವಿಟ್ಟುಕೊಂಡರೆ ಇದರಿಂದ ನಿಮಗೂ ಒಳ್ಳೆಯದು ಹಾಗೂ ದೇಶದ ಹಿತಕ್ಕಾಗಿ ಒಂದು ಸುವಾರ್ತೆಯಾಗುತ್ತದೆ. ಕುರಾನ್ ಮತ್ತು ಪ್ರವಾದಿಯರ ಸುನ್ನತ್ ಜೊತೆಯಾ ಮತ್ತು ಪೂರ್ವಿಕರ ಕಾರ್ಯಕುಶಲತೆಗಳಿಂದ ನಮ್ಮ ವರ್ತಮಾನ ರೂಪಿಸಲು, ಭವಿಷ್ಯ ಮಿಂಚಿಸಲು ನಿರ್ದೇಶನ ತೆಗೆದುಕೊಳ್ಳಬೇಕಾಗಿದೆ'' ಎಂದರು. ಈ ಕಾರವಾನಿನ ನಾಯಕರಾದ ಮುಫ್ತಿ ಅಶ್ರಫ್ ಅಲಿರವರು ಮಾತನಾಡಿ ''ಮುಸ್ಲಿಂ ಬಾಂಧವರು ತಮ್ಮ ಮತಭೇದವನ್ನು ಮರೆತು ತಮ್ಮ ಸಾಲುಗಳಲ್ಲಿ ಏಕತೆಯನ್ನು ತರಬೇಕಾಗಿದೆ. ಇದು ನಮ್ಮ ದೇಶ. ನಾವು ಇಲ್ಲಿ ಬಾಡಿಗೆದಾರರಲ್ಲ. ಮಾಲೀಕರ ಸ್ಥಾನಮಾನ ಪಡೆದಿರುವವರು. ಆದ್ದರಿಂದ ದೇಶದ ಸ್ಥಿತಿಗತಿಯ ಮೇಲೆ ಸಂಪೂರ್ಣ ಗಮನ ಕೊಡಬೇಕು. ಕೇವಲ ಗಮನ ಕೊಟ್ಟರೆ ಸಾಕಾಗದು. ಅದರ ಬಗ್ಗೆ ಚಿಂತನೆಯೂ ಸಹ ಇರಬೇಕು'' ಎಂದರು. ಆದಿಚುಂಚನಗಿರಿ ಮಹಾಸ್ವಾಮಿಗಳು ಮಾತನಾಡಿ ''ಹೃದಯಗಳಲ್ಲಿ ತುಂಬಿಕೊಂಡಿರುವ ಕೊಳೆಯನ್ನು ತೆಗೆದು ಅವುಗಳನ್ನು ನಿರ್ಮಲಗೊಳಿಸಿ. ಆಗಲೇ ದೇಶದಲ್ಲಿ ಏಕತೆ ಮತ್ತು ಸೌಹಾರ್ದತೆಯ ವಾತಾವರಣ ಕಲ್ಪಿಸಲು ಸಾಧ್ಯ'' ಎಂದು ಒತ್ತಿ ಹೇಳಿದರು. ಈ ಸಭೆಯಲ್ಲಿ ಕಾರವಾನಿನ ಸದಸ್ಯರು ಹಾಗೂ ಅತಿಥಿಗಳಿಗೆ ಪುಷ್ಪಹಾರಗಳನ್ನು ಅರ್ಪಿಸಿ ಗೌರವಿಸಲಾಯಿತು. ಮಂಡ್ಯ ನಗರದ ಈ ಕಾರ್ಯಕ್ರಮ ಯಶಸ್ವಿಗೊಳಿಸಲು ಮಂಡ್ಯ ನಗರದ ಸ್ವಾಗತ ಸಮಿತಿ ಹಾಗೂ ವಿಶೇಷವಾಗಿ ಜನಾಬ್ ಡಾ॥ ನಜೀರ್ ಅಹ್ಮದ್ ಮತ್ತು ಜನಾಬ್ ಜಬೀಉಲ್ಲ ಬಹಳ ಶ್ರಮವಹಿಸಿದ್ದರು. ಅಲ್ಲಾಃ ಅವರಿಗೆ ಇದರ ಪುಣ್ಯಫಲ ನೀಡಲಿ.

## ಮೈಸೂರು

ಈ ಶುಭ ಕಾರವಾನ್ ನ್ಯಾಯಮೂರ್ತಿ, ಮಹಾಪರಿಶ್ರಮಿ, ದೇಶ ಮತ್ತು ಸಮುದಾಯಕ್ಕಾಗಿ ಹುತಾತ್ಮರಾದ ಹಜ್‌ರತ್ ಫತೆಹ್ ಅಲಿ ಟೀಪು ಸುಲ್ತಾನ್‌ರವರು ಆಳಿದ ಶ್ರೀರಂಗ ಪಟ್ಟಣದಿಂದ ಅವರ ಆತ್ಮಕ್ಕೆ ಪುಣ್ಯಫಲ ತಲುಪಿಸುತ್ತ 4-30ಕ್ಕೆ ಮೈಸೂರು ತಲುಪಿತು. ಜನಾಬ್ ಅಜೀಜ್ ಸೇಠ್ ಸಾಹೇಬ್ (ಅಧ್ಯಕ್ಷರು, ಕಾರವಾನ್ ಸ್ವಾಗತ

ಸಮಿತಿ) ಅವರ ನೇತೃತ್ವದಲ್ಲಿ ಮೈಸೂರಿನ ನಾಗರಿಕರು ಟೋಲ್‌ಗೇಟ್‌ನಲ್ಲೇ ಕಾರವಾನಿಗೆ ಅತ್ಯುತ್ತಮ ಹಾಗೂ ಭವ್ಯ ಸ್ವಾಗತ ನೀಡಿದರು. ಇಲ್ಲಿಂದಲೇ ರ‍್ಯಾಲಿ ಹೊರಟಿತು. ಸುಮಾರು 3 ಕಿ. ಮೀ. ಉದ್ದದ ಈ ರ‍್ಯಾಲಿ ನಗರದ ಹೆದ್ದಾರಿಗಳಿಂದ ಹೊರಟು ಟೌನ್‌ಹಾಲ್ ತಲುಪಿತು. ಈ ರ‍್ಯಾಲಿಯಿಂದಾಗಿ ನಗರದ ಇಡೀ ಟ್ರಾಫಿಕ್ ಜಾಮ್ ಆಗಿತ್ತು. ಪೋಲಿಸ್ ಬಂದೋಬಸ್ತ್ ಸಹ ಬಹಳ ಚೆನ್ನಾಗಿತ್ತು. ಸಾಯಂಕಾಲದ ಪ್ರಾರ್ಥನೆಯ ನಂತರ ಆಲಿ ಜನಾಬ್ ಅಜೀಜ್ ಸೇಠ್ ಸಾಹೇಬರ ಘನ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯ ಕಾರ್ಯಕ್ರಮ ಪ್ರಾರಂಭವಾಯಿತು. ಈ ಸಭೆಯಲ್ಲಿ ಮೈಸೂರು ನಾಗರೀಕರು ಜಾತಿ, ಧರ್ಮ ಹಾಗೂ ರಾಜಕೀಯ ಭೇದ ಭಾವವಿಲ್ಲದೆ ಅತ್ಯಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಡಾ॥ ವಿಜಾಸುದ್ದೀನ್ ಅಶ್ರಫಿರವರು ತಮ್ಮ ಕನ್ನಡ ಭಾಷಣದಲ್ಲಿ, "ಮುಸ್ಲಿಮರು ಈ ದೇಶದ ಮಾಲೀಕರು. ಇವರಲ್ಲದೆ ಈ ದೇಶದಲ್ಲಿ ವಾಸಿಸುತ್ತಿರುವ ಮುಸ್ಲಿಮೇತರರು ಅಂದರೆ ಹಿಂದೂ ಧರ್ಮದವರು, ಕ್ರೈಸ್ತ ಧರ್ಮದವರು, ದಲಿತ ಬಾಂಧವರು, ಬೌದ್ಧರು, ಜೈನ ಮತ್ತಿತರ ಧರ್ಮದವರೆಲ್ಲರೂ ಈ ದೇಶದ ಮಾಲೀಕರು. ಇಲ್ಲಿ ಕೇವಲ ಒಂದೇ ಧರ್ಮದ ಆಳ್ವಿಕೆ ನಡೆಯಲು ಸಾಧ್ಯವಿಲ್ಲ. ಇಲ್ಲಿ ಎಲ್ಲರ ಸರಿಸಮನಾದ ಹಾಗೂ ಸಮನ್ವಯದ ಆಳ್ವಿಕೆ ಇದೆ. ಇದೇ ಏಕತಾ ಮತ್ತು ಸೌಹಾರ್ದತಾ ಯಾತ್ರೆಯ ಸಂದೇಶ. ಬನ್ನಿ ನಾವೆಲ್ಲರೂ ಒಟ್ಟುಗೂಡಿ ಒಂದು ಹೊಸ ದೇಶವನ್ನು ಕಟ್ಟೋಣ" ಎಂದರು. ಕಾರವಾನ್ ನಾಯಕರಾದ ಮುಫ್ತಿ ಅಶ್ರಫ್ ಅಲಿರವರು ಮಾತನಾಡಿ "ಇಂದು ನಮ್ಮ ದೇಶಕ್ಕೆ ಅತಿದೊಡ್ಡ ಅಪಾಯ ವ್ಯಕ್ತಿಗತ ಸ್ವಾತಂತ್ರ್ಯದ ವಿರೋಧಿ ಶಕ್ತಿಗಳಿಂದ ಉಂಟಾಗಿದೆ. ಇಂತಹ ಸೂಕ್ಷ್ಮ ಸಮಯದಲ್ಲಿ ನಾವು ಕೇವಲ ಪ್ರೇಕ್ಷಕರಾಗಿರುವುದು ಸರಿಯಲ್ಲ. ನಮ್ಮ ಕಾರ್ಯಮಗ್ನತೆಗಳ ಜೊತೆಯಲ್ಲಿ ದೇಶದ ರಕ್ಷಣೆ ಕಡೆಗೂ ಗಮನ ಹರಿಸಬೇಕು. ಈ ಕಾರವಾನಿನಲ್ಲಿ ಭಾಗವಹಿಸಿರುವರೆಲ್ಲರೂ ತಮ್ಮ ಕರ್ಮಭೂಮಿಯಲ್ಲಿ ಆಳವಾಗಿ ತೊಡಗಿರುವವರು. ಆದರೂ ಕೂಡ ದೇಶ ಮತ್ತು ದೇಶಬಂಧುಗಳ ಹಿತಚಿಂತನೆಯ ನೋವನ್ನು ತೆಗೆದುಕೊಂಡು ಈ ಯಾತ್ರೆಯಲ್ಲಿ ಭಾಗವಹಿಸಲು ಬಂದಿದ್ದಾರೆ. ಅವರು ಈ ನೋವು ಮತ್ತು ಚಿಂತನೆಯನ್ನು ಎಲ್ಲರಿಗೂ ಹಂಚಲು ಬಂದಿರುವರು" ಎಂದರು. ಈ ರಿಫಾಯಿ ಫಕೀರ್ ಮಾತನಾಡಿ "ಇಂದು ದೇಶದ ಇಡೀ ವ್ಯವಸ್ಥೆ ಅಸ್ಥಿರವಾಗಿದೆ. ದೇಶದಲ್ಲಿ 'ಜಂಗಲ್‌ರಾಜ್' ನಡೆಯುತ್ತಿದೆ. ಹಿಂದುಸ್ತಾನಿ ಸಮಾಜ ಯಾವ ಹಾದಿಯನ್ನು ಹಿಡಿದಿದೆಯೋ ಅದರ ಕೆಟ್ಟ ಭವಿಷ್ಯದ ಬಗ್ಗೆ ಪ್ರತಿಯೊಬ್ಬನೂ ಬಹಳ ಸರಳವಾಗಿ ಊಹಿಸಬಹುದಾಗಿದೆ. ಈ ರೀತಿಯ ಕಳವಳವನ್ನುಂಟುಮಾಡುವ ಸ್ಥಿತಿಗಳನ್ನು ಸುಧಾರಿಸಲು ಇಸ್ಲಾಂ ಧರ್ಮದ ಮುಖಂಡರು, ಸಮುದಾಯದ ಮೇಧಾವಿಗಳು, ವಿವೇಕಿಗಳೆಲ್ಲರೂ ತಮ್ಮ ಮನಧನವನ್ನೆಲ್ಲ ಅರ್ಪಿಸುತ್ತಿದ್ದಾರೆ. ಇಂತಹ ಸಂಕಷ್ಟದಲ್ಲಿ ತರೀಖತ್ತಿನ ಜನ ಮಶಾಯೆಖ್‌ರಿಗೂ ಸಹ ಸಮುದಾಯಕ್ಕಾಗಿ, ದೇಶಕ್ಕಾಗಿ ಕರ್ಮಭೂಮಿಯಲ್ಲಿ ಬರಬೇಕಾಗಿದೆ" ಎಂದರು. ಆರ್ಚ್‌ಬಿಷಪ್ ಫಾದರ್ ರಾಯ್‌ರವರು



ಮಾತನಾಡಿ "ನಾವೆಲ್ಲರೂ ನಮ್ಮ ನಮ್ಮ ಧರ್ಮಪಾಲನೆಯನ್ನು ಮಾಡುತ್ತ ಈ ದೇಶ ವಿನಾಶ ಆಗದೆ ಹಾಗೆ ಕಾಪಾಡಬೇಕಾಗಿದೆ. ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಯಾವ ಮಹಾನ್ ಉದ್ದೇಶವಿಟ್ಟುಕೊಂಡು ಏಕತಾ ಮತ್ತು ಸೌಹಾರ್ದತಾ ಯಾತ್ರೆ ಕೈಗೊಂಡಿದೆಯೋ ಇದರ ಸದುದ್ದೇಶದಲ್ಲಿ ಸಹಭಾಗಿಯಾಗಿ ಇಡೀ ಕ್ರೈಸ್ತ ಪಂಗಡ ಅದರ ಜೊತೆಯಲ್ಲಿದೆ" ಎಂದರು. ಜನಾಬ್ ಇಬ್ರಾಹಿಂ ಖಲೀಲುಲ್ಲಾರವರು ಮಾತನಾಡಿ "ಗುಂಪು ಘರ್ಷಣೆ, ಹಿಂಸೆ, ಅತ್ಯಾಚಾರ, ದಬ್ಬಾಳಿಕೆಯಿಂದ ದೇಶದಲ್ಲಿ ಶಾಂತಿ ತರಲು ಸಾಧ್ಯವಿಲ್ಲ. ಹಾಗೂ ಪ್ರೇಮ, ಒಳ್ಳೆಯತನ, ಹಿತಚಿಂತನೆಯಿಂದ ಹೃದಯ ಗೆದ್ದಾಗ ಮಾತ್ರ ದೇಶದಲ್ಲಿ ಶಾಂತಿಯ ಗಾಳಿ ಬೀಸಲು ಸಾಧ್ಯ. ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಯಾತ್ರೆ ಮುರಿದುಹೋಗಿರುವ ಹೃದಯಗಳನ್ನು ಜೋಡಿಸಲು ಹೊರಟಿದೆ. ದೇವರ ಸಹಾಯವಿದ್ದರೆ ನಾವು ನಮ್ಮ ಉದ್ದೇಶದಲ್ಲಿ ಉತ್ತೀರ್ಣರಾಗುತ್ತೇವೆ" ಎಂದರು. ಬಶೀರ್ ಅಹ್ಮದ್ ಅಡ್ವೊಕೇಟ್ ಮಾತನಾಡಿ "ನಮ್ಮನ್ನು ನಾವು ಸುಧಾರಿಸಿಕೊಂಡರೆ ನಮ್ಮ ಸುತ್ತ ಮುತ್ತಿನ ವಾತಾವರಣವೂ ಸುಧಾರಿಸುತ್ತದೆ. ನಾವು ಕೆಡುವುದರಿಂದ ಸ್ಥಿತಿ ಇನ್ನೂ ಹದಗೆಡುತ್ತದೆ. ಮಾನವನ ವೈಯಕ್ತಿಕ ಸ್ಥಿತಿಯನ್ನು ಸುಧಾರಿಸಬೇಕು. ಆಗಲೇ ಒಂದು ಒಳ್ಳೆಯ ಸಮಾಜವು ಉದ್ಭವಿಸಲು ಸಾಧ್ಯ. ಸಮಾಜದಿಂದಲೇ ದೇಶ; ದೇಶದ ಸುಧಾರಣೆ ಅಥವಾ ಅದರ ಕೆಡಕು ಆ ದೇಶದ ಜನರ ಮೇಲೆ ನಿರ್ಧಾರವಾಗುತ್ತದೆ. ನಮ್ಮ ಕಾರವಾನ್‌ನಿಂದ ಇದೇ ಸಂದೇಶ ನೀಡಲಾಗುತ್ತಿದೆ. ದೇಶಬಾಂಧವರು ಯಾರೇ ಇರಲಿ ಹಿಂದು, ಮುಸ್ಲಿಂ, ಸಿಖ್ ಅಥವಾ ಕ್ರೈಸ್ತ ಅವರೆಲ್ಲರೂ ತಮ್ಮ ಚಿಂತನೆ ಮಾಡಿ ತಮ್ಮನ್ನು ಸುಧಾರಿಸಿಕೊಳ್ಳಬೇಕು " ಎಂದರು. ಮೈಸೂರಿನ ಸರ್ ಖಾಜಿ ಮೌಲಾನ ಮುಹಮ್ಮದ್ ಹಯಾತ್ ಸಾಹೇಬರು ಮಾತನಾಡಿ "ಮುಸಲ್ಮಾನರು ತಮ್ಮ ಭಿನ್ನಾಭಿಪ್ರಾಯವನ್ನು ಮರೆಯಬೇಕು. ಯಾವುದೇ ಭೇದ ಭಾವವಿಲ್ಲದೇ ದೇಶ ಬಾಂಧವರೊಡನೆ ತಮ್ಮ ಸಂಪರ್ಕ ಬೆಳೆಸಬೇಕು. ಎಲ್ಲರನ್ನೂ ಜೊತೆಯಲ್ಲಿ ತೆಗೆದುಕೊಂಡು ಒಂದು ಹೊಸ ದೇಶದ ನಿರ್ಮಾಣ ಮಾಡಬೇಕು" ಎಂದರು. ಸೆಕ್ಯುಲರ್ ಫ್ರಂಟ್‌ನ ಶ್ರೀ ಚಂದ್ರಶೇಖರ್, ಮೈಸೂರು ನಗರದ ಸುಪ್ರಸಿದ್ಧ ವ್ಯಕ್ತಿಯಾದ ಪ್ರೊ॥ ಭಗ್‌ವಾನ್ ಮತ್ತಿತರ ಮುಸ್ಲಿಮೇತರರು ಸಹ ಭಾಷಣ ಮಾಡಿ ತಮ್ಮ ಜನಾಂಗದರು ಈ ಸದುದ್ದೇಶದಿಂದ ಹೊರಟಿರುವ ಮಿಲ್ಲಿ ಕೌನ್ಸಿಲ್‌ಗೆ ತಮ್ಮ ಪೂರ್ಣ ಬೆಂಬಲ ನೀಡಬೇಕೆಂದು ಕರೆ ಕೊಟ್ಟರು. ಜನಾಬ್ ಅಜೀಜ್ ಸೇಠ್‌ರವರು ಅಧ್ಯಕ್ಷ ಭಾಷಣದಲ್ಲಿ "ಈ ದೇಶ ಯಾರ ಜಹಗೀರು ಅಥವಾ ಆಸ್ತಿ ಅಲ್ಲ. ಇದು ಎಲ್ಲರ ಸಮಾನತೆಯ ದೇಶ. ಯಾವ ಧರ್ಮದವರೇ ಆಗಲಿ, ಯಾವ ಕೋಮಿನವರೇ ಆಗಲಿ ಈ ದೇಶದ ಮೇಲೆ ಪ್ರವೀಣವಾಗುವ ಕನಸನ್ನು ಕಾಣುವುದು ಸಾಧ್ಯವಿಲ್ಲ. ಈಗ ಸಮಯ ಬಂದಿದೆ. ಈ ರೀತಿಯ ಪ್ರಯತ್ನ ಹಾಗೂ ಉದ್ದೇಶಗಳನ್ನು ಏಕತಾ ಮತ್ತು ಸೌಹಾರ್ದತೆಯ ಪ್ರಯತ್ನಗಳಿಂದ ವಿಫಲಗೊಳಿಸಬೇಕಾಗಿದೆ" ಎಂದರು. ಜನಾಬ್ ಅಬ್ದುಲ್ ಅಜೀಜ್ ಚಾಂದ್ (ಕಾರ್ಯದರ್ಶಿ , ಮಿಲ್ಲಿಕೌನ್ಸಿಲ್ ಮೈಸೂರು)ರವರು

ವಂದನಾರ್ಪಣೆ ಮಾಡುತ್ತ "ಇಂದು ದೇಶದಲ್ಲಿ ಒಂದು ಹೊಸ ಧರ್ಮ ಉದ್ಭವಿಸಿದೆ. ಅದು "ಕುರ್ಚಿಯ ಧರ್ಮ". ಇಂದು ನಮಗೆಲ್ಲ ಪೀಡಿಸುತ್ತಿರುವುದೇ ಈ ಹೊಸಧರ್ಮ. ಈ ಹೊಸಧರ್ಮವನ್ನು ನಾಶಪಡಿಸಬೇಕಾಗಿರುವುದೇ ಈ ದೇಶವಾಸಿಗಳ ಕರ್ತವ್ಯ" ಎಂದರು. ಮೈಸೂರು ನಗರದ ಎಲ್ಲ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸ್ವಾಗತ ಸಮಿತಿ ಹಾಗೂ ಮುಖ್ಯವಾಗಿ ಮೌಲಾನ ಮುಫ್ತಿ ಬಷೀರ್ ಅಹ್ಮದ್ ನದ್‌ವಿ, ಮೌಲಾನ ಮುಹಮ್ಮದ್ ನಸೀಂ ರಿಶಾದಿ, ಜನಾಬ್ ಶೌಕತ್ ಸಾಹೆಬ್, ಜನಾಬ್ ಕಲೀಂ ಸಾಹೇಬ್, ಜನಾಬ್ ಶಾನ್‌ರವರೆಲ್ಲರೂ ಸಹಕರಿಸಿ ಪ್ರಯತ್ನಿಸಿ ಶ್ರಮಪಟ್ಟಿದ್ದಾರೆ. ದೇವರು ಅವರಿಗೆ ಇದರ ಪುಣ್ಯಫಲ ನೀಡಲಿ, ಆಮೀನ್.

## 14-12-95: ಕುಣಿಗಲ್‌ನಿಂದ ಪಿರಿಯೂರಿನವರೆಗೆ

14ನೇ ಡಿಸೆಂಬರ್ ಬೆಳಗ್ಗೆ ಏಕತೆ ಮತ್ತು ಸೌಹಾರ್ದತೆಯ ಯಾತ್ರೆ ದಾರುಲ್‌ಉಲೂಂ ಸಿದ್ದೀಖಿಯ ಮೈಸೂರಿನಿಂದ ಹೊರಟಿತು. ಜನಾಬ್ ಅಬುಬಕರ್ ಸೇಠ್, ಜನಾಬ್ ಇಖ್‌ಬಾಲ್ ಸೇಠ್ ಸಾಹೇಬರು ಯಾತ್ರಿಕರಿಗೆ ಸಕಲ ಮರ್ಯಾದೆಯೊಡನೆ ಮದ್ರಸಾದ ಅತಿಥಿಗೃಹದಲ್ಲಿ ತಂಗಲು ಏರ್ಪಾಡು ಮಾಡಿದ್ದರು. ಮೈಸೂರಿನ ವಿಶೇಷತೆಯಂತೆ ಯಾತ್ರಿಕರಿಗೆ ಸತ್ಕಾರ ಮಾಡಲಾಯಿತು. ಅಲ್ಲಾಃ ಇವರಿಗೆ ಇದರ ಪುಣ್ಯಫಲ ನೀಡಲಿ, ಆಮೀನ್.

### ಕುಣಿಗಲ್

ಈ ಶುಭಯಾತ್ರೆ ಬೆಳಗ್ಗೆ 10-00 ಘಂಟೆಗೆ ಕುಣಿಗಲ್ ತಲುಪಿತು. ಇನ್ಸ್‌ಪೆಕ್ಷನ್ ಬಂಗ್ಲೆಯಲ್ಲಿ ಕುಣಿಗಲ್ ನಾಗರೀಕರು, ಮುಸ್ಲಿಂ ಹಾಗೂ ಮುಸ್ಲಿಮೇತರ ನಾಯಕರು ಹಾಗೂ ಗಣ್ಯ ವ್ಯಕ್ತಿಗಳೊಡನೆ ಕಾರವಾನಿನ ಮುಖ್ಯಸ್ಥ ಮೌಲಾನ ಮುಹಮ್ಮದ್ ಅಶ್ರಫ್ ಅಲಿ, ಡಾ|| ವಿಜಾಸುದ್ದೀನ್, ಜನಾಬ್ ಇಬ್ರಾಹಿಂ ಖಲೀಲುಲ್ಲಾ ಖಾನ್‌ರವರೆಲ್ಲರೂ ಮಾತನಾಡಿ ಜನತೆಗೆ ಕಾರ್ವಾನಿನ ಉದ್ದೇಶಗಳನ್ನು ಪರಿಚಯ ಮಾಡಿಸಲಾಯಿತು. ಕುಣಿಗಲ್ ನಾಗರೀಕರು ಕಾರವಾನಿಗೆ ನಗರದಲ್ಲಿ ಏಕತಾ ಮತ್ತು ಸೌಹಾರ್ದತೆಯ ವಾತಾವರಣವನ್ನು ಕಾಪಾಡಿಕೊಂಡು ಬರುವ ಭರವಸೆ ನೀಡಿದರು. ತುಮಕೂರು ಜಿಲ್ಲೆ ಎಸ್.ಪಿ. ಜನಾಬ್ ನಿಸಾರ್ ಅಹ್ಮದ್‌ರವರು ಕಾರವಾನಿನ ಗೌರವಾರ್ಥ ಪೋಲಿಸ್ ಸ್ಕ್ವಾಡ್‌ನ ಬಂದೋಬಸ್ತ್ ಮಾಡಿದ್ದರು. ಇದರಲ್ಲಿ ಒಂದು ಪೋಲಿಸ್ ವ್ಯಾನ್ ಹಾಗೂ ಎರಡು ಜೀಪ್‌ಗಳಿದ್ದವು. ಕಾರವಾನ್ ಎಲ್ಲಿಯವರಿಗೆ ತುಮಕೂರು ಜಿಲ್ಲೆಯಲ್ಲಿತ್ತೋ ಅಲ್ಲಿಯವರಿಗೆ ಈ ಪೋಲೀಸ್ ಸ್ಕ್ವಾಡ್ ಇದರ ಜೊತೆಯಲ್ಲಿತ್ತು. ಜನಾಬ್ ನಿಸಾರ್ ಅಹ್ಮದ್ ಸಾಹೇಬರು ಸ್ವತಃ



ಪೋಲಿಸ್ ದಸ್ತೆಯಲ್ಲಿ ಇದ್ದರು. ಅವರು ಮಿಲ್ಲಿ ಕೌನ್ಸಿಲ್‌ಗೆ ಯಾವ ರೀತಿಯಲ್ಲಿ ಸಕಲ ಮರ್ಯಾದೆ ತೋರಿಸಿದರೋ ಅದು ಪೋಲಿಸ್ ಇಲಾಖೆಗೆ ಒಂದು ಗೌರವ. ಅಲ್ಲಾಃರವರು ಅವರಿಗೆ ಅದರ ಪುಣ್ಯ ಫಲ ನೀಡಲಿ, ಆಮೀನ್.

### ತುಮಕೂರು

ಕಾರವಾನ್ 11-00 ಘಂಟೆಗೆ ತುಮಕೂರು ನಗರದ ಸರಹದ್ದಿನಲ್ಲಿ ಪ್ರವೇಶಿಸಿತು. ನಗರದಿಂದ ಬಹುದೂರ ತುಮಕೂರಿನ ನಾಗರೀಕರು ಸ್ವಾಗತ ಬಯಸಲು ಅವರವರ ವಾಹನಗಳೊಂದಿಗೆ ನಿರೀಕ್ಷಿಸುತ್ತಿದ್ದರು. ಕಾರವಾನು ತಲುಪುತ್ತಿದ್ದ ಹಾಗೆ ಏಕತೆ ಮತ್ತು ಸೌಹಾರ್ದತೆಯ ಘೋಷಣೆಗಳಿಂದ ಸ್ವಾಗತ ಮಾಡಲಾಯಿತು. ಕಾರವಾನಿನ ಸದಸ್ಯರಿಗೆ ಪುಷ್ಪಮಾಲೆ ಅರ್ಪಿಸಲಾಯಿತು. ತುಮಕೂರು ನಾಗರೀಕರೊಡನೆ ಈ ಕಾರವಾನ್ ನಗರದ ಪ್ರಮುಖ ಬೀದಿಗಳಲ್ಲಿ ಹೊರಟು ಶ್ರೀ ಗುಬ್ಬಿ ವೀರಣ್ಣ ರಂಗಮಂದಿರ ತಲುಪಿತು. ಇಲ್ಲಿ ಬಹಿರಂಗ ಸಭೆ ಏರ್ಪಾಡು ಮಾಡಲಾಗಿತ್ತು. ಜನಾಬ್ ಆರಿಫ್ ಮತೀನ್ ಸಾಹೇಬ್ (ಸೆಕ್ರೆಟರಿ, ಮಿಲ್ಲಿ ಕೌನ್ಸಿಲ್ ತುಮಕೂರು ಜಿಲ್ಲೆ)ರವರು ಸ್ವಾಗತಭಾಷಣ ಮಾಡುತ್ತ "ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಕಾರವಾನ್ ಏಕತೆ ಮತ್ತು ಸೌಹಾರ್ದತೆಯ ಸಂದೇಶ ತೆಗೆದುಕೊಂಡು ನಮ್ಮ ಪಟ್ಟಣಕ್ಕೆ ಬಂದಿದೆ. ನಾನು ತುಮಕೂರು ನಾಗರೀಕರ ಪರವಾಗಿ ಹೃದಯಪೂರ್ವಕ ಸ್ವಾಗತ ಬಯಸುತ್ತೇನೆ" ಎಂದರು. ಮೌಲಾನ ವಲಿಯುಲ್ಲ ಸಾಹೇಬರು (ಸೆಕ್ರೆಟರಿ, ಮಿಲ್ಲಿ ಕೌನ್ಸಿಲ್ ವಾಣಂಬಾಡಿ, ತಮಿಳುನಾಡು) ಮಾತನಾಡಿ "ಅಲ್ಲಾಃತಆಲಾ ಮಾನವರನ್ನು ವಿಭಿನ್ನ ಕ್ಷೇತ್ರಗಳಲ್ಲಿ, ವಂಶಗಳಲ್ಲಿ, ಬಣ್ಣಗಳಲ್ಲಿ ಹಾಗೂ ಮುಖಗಳಲ್ಲಿ ಸೃಷ್ಟಿಸಿದ್ದಾನೆ. ಅವರೆಲ್ಲರಿಗೂ ವಿಭಿನ್ನ ಭಾಷೆಗಳನ್ನು ಕೊಟ್ಟಿದ್ದಾನೆ. ಇವೆಲ್ಲ ನಮ್ಮ ಗುರುತಿಗಾಗಿ ಹಾಗೂ ಪರಸ್ಪರ ಪರಿಚಯಕ್ಕಾಗಿ. ಒಬ್ಬರೊಬ್ಬರನ್ನು ವಿರೋಧಿಸಲು ಅಲ್ಲ. ಮಾನವ ತನ್ನ ಅವಿವೇಕದಿಂದ ವಿರೋಧಗಳನ್ನು ಕಟ್ಟಿಕೊಂಡಿದ್ದಾನೆ. ಈಗ ಮಾನವರು ಇದನ್ನು ತಿಳಿದುಕೊಳ್ಳುವಂತಹ ಸಮಯ ಬಂದಿದೆ ಹಾಗೂ ಪರಸ್ಪರ ವಿರೋಧಗಳನ್ನು ತಡೆಯಬೇಕಾಗಿದೆ. ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ದೇಶಾದ್ಯಂತ ಏಕತಾ ಮತ್ತು ಸೌಹಾರ್ದತಾ ಯಾತ್ರೆ ಏರ್ಪಡಿಸಿ ಮಾನವ ಕಲ್ಯಾಣದ ದೊಡ್ಡ ಕಾರ್ಯ ಸಾಧಿಸಿ ಇಡೀ ಮನುಕುಲಕ್ಕೆ ಉಪಕಾರ ಮಾಡಿದೆ" ಎಂದರು. ಈ ರಿಫಾಯಿ ಫಕೀರ್ ಮಾತನಾಡಿ "ಅಲ್ಲಾಃ ತಆಲಾ ನ್ಯಾಯಪ್ರಿಯತೆ, ಸರಿಸಮಾನತೆ ಹಾಗೂ ಸೌಹಾರ್ದತೆಯನ್ನು ಮೆಚ್ಚುತ್ತಾರೆ. ಹಾಗೆಯೇ ಈರ್ಷೆ, ತಿರಸ್ಕಾರ, ವೈರತ್ವ, ಗೊಂದಲ ಹಾಗೂ ದಂಗೆಯನ್ನು ಅಲ್ಲಾಃರವರು ಖಂಡಿತವಾಗಿ ಇಷ್ಟಪಡುವುದಿಲ್ಲ. ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ದೇಶದಲ್ಲಿ ಅಲ್ಲಾಃ ರವರಿಗೆ ಇಷ್ಟವಾಗುವಂತಹ ಮಾತುಗಳನ್ನು ಪ್ರಚಾರ ಮಾಡಲು, ಇಷ್ಟವಿಲ್ಲದಂತಹ

ಮಾತುಗಳನ್ನು ಕೊನೆಗೊಳಿಸಲು ರಾಜ್ಯಮಟ್ಟದಲ್ಲಿ ಈ ಯಾತ್ರೆ ಹೊರಟಿದೆ. ಅಲ್ಲಾಃ ತಆಲಾರ ಪರೋಕ್ಷ ಸಹಾಯ ಈ ಯಾತ್ರೆಯೊಂದಿಗೆ ಇದೆ'' ಎಂದು ಹೇಳಿದರು. ಜನಾಬ್ ಬಷೀರ್ ಅಹ್ಮದ್ ಅಡ್ವೊಕೇಟ್ ಮಾತನಾಡಿ ದೇಶವಾಸಿಗಳೆಲ್ಲರೂ ಅವರವರ ಧರ್ಮದ ವಿಧ್ಯೆಗಳಂತೆ ನಡೆದುಕೊಂಡರೆ ಸಾಕು, ಇದೇ ಶಾಂತಿ ಸೌಹಾರ್ದತೆಗೆ ಬೇಕಾದಷ್ಟಾಗುತ್ತದೆ. ಸರ್ಕಾರ ಮತ್ತು ಕಾನೂನಿನ ಕಠಿನಕ್ರಮ ಬೇಕೇ ಇಲ್ಲ. ಎಲ್ಲ ಧರ್ಮಗಳು ಉತ್ತಮ ನಡತೆ ಹಾಗೂ ಒಳ್ಳೆಯ ಕೆಲಸಗಳ ವಿದ್ಯೆ ನೀಡುತ್ತವೆ'' ಎಂದರು. ಶ್ರೀ ಲಕ್ಷ್ಮೀನರಸಿಂಹಯ್ಯ (ಮಾಜಿ ರಾಜ್ಯ ಸಚಿವರು) ಮಾತನಾಡಿ ''ನಾವು ಏಕತೆ ಮತ್ತು ಸೌಹಾರ್ದತೆಯ ಒಳ್ಳೆಯ ಕೆಲಸಕ್ಕೆ ಹೊರಟಿರುವ ಮಿಲ್ಲಿ ಕೌನ್ಸಿಲ್‌ನೊಡನೆ ಸಹಕರಿಸಲು ಸದಾ ಸಿದ್ಧರಾಗಿದ್ದೇವೆ. ಅವರು ಏನು ನಿರ್ದೇಶನ ನಿಡುತ್ತಾರೋ ನಾವು ಆ ಕೆಲಸ ಮಾಡಲು ಸಿದ್ಧ'' ಎಂದರು. ಜನಾಬ್ ಇಬ್ರಾಹಿಂ ಖಲೀಲುಲ್ಲ ಖಾನ್‌ರವರು ಮಾತನಾಡಿ ''ನಮ್ಮ ದೇಶದಲ್ಲಿ ಧಾರ್ಮಿಕ ಸಮಾನತೆ, ಸಹಚಿಂತನೆಯು ಮೆಲ್ಲಮೆಲ್ಲನೆ ನಿಧಾನವಾಗಿ ಹೊರಟುಹೋಗುತ್ತಿದೆ. ಇದಕ್ಕೆ ವ್ಯಕ್ತಿಗತ ಸ್ವಾತಂತ್ರ್ಯ ವಿರೋಧಿ ಸಿದ್ಧಾಂತ ಶಕ್ತಿಗಳು ಹಾಗೂ ಕೋಮುವಾದಿ ಶಕ್ತಿಗಳು ಪ್ರಯತ್ನಿಸುತ್ತಿರುವುದು ಸಹ ನಿಜ. ನಾವು ನಮ್ಮ ಏಕತೆ ಹಾಗೂ ಸೌಹಾರ್ದತೆಯ ಶಕ್ತಿಯಿಂದ ಇದರ ವಿರುದ್ಧ ಹೋರಾಟ ನಡೆಸಬೇಕಾಗಿದೆ. ದೇಶವನ್ನು ರಕ್ಷಿಸಬೇಕಾಗಿದೆ'' ಎಂದರು. ಜನಾಬ್ ಶಫೀ ಅಹ್ಮದ್ (ಮಾಜಿ ಎಂ. ಎಲ್. ಎ.)ರವರು ಮಾತನಾಡಿ ''ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಶಿಸ್ತು ಹಾಗೂ ಸುವ್ಯವಸ್ಥೆಯಿಂದ ದೇಶದಲ್ಲಿ ಏಕತೆ ಹಾಗು ಸ್ನೇಹ ಸಂಬಂಧಗಳಿಗೆ ಹೇಗೆ ಪ್ರಯತ್ನಿಸುತ್ತಿದೆಯೋ ಅದು ದೇಶದ ಇತಿಹಾಸದಲ್ಲಿ ಹೊಳೆಯುವಂತಹ ಒಂದು ಉದಾಹರಣೆ. ಪಂಗಡ ಹಾಗೂ ಪಕ್ಷಗಳ ಭೇದಭಾವವಿಲ್ಲದೇ ನಾವು ಇದಕ್ಕೆ ಸಹಕಾರ ನೀಡಬೇಕಾಗಿದೆ'' ಎಂದರು. ಕಾರವಾನಿನ ಮುಖ್ಯಸ್ಥರಾದ ಮುಫ್ತಿ ಅಶ್ರಫ್ ಅಲಿ ರವರು ಮಾತನಾಡಿ ''ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 48 ವರ್ಷಗಳಾದರೂ ದೇಶದ ವಾತಾವರಣ ಹೇಗಿದೆ ಎಂದರೆ ನಾವು ಈಗಲೂ ಏಕತೆ ಮತ್ತು ಸೌಹಾರ್ದತೆಯ ಕೆಲಸ ಮಾಡಬೇಕಾಗಿದೆ. ನಾವು ಸ್ವಾತಂತ್ರ್ಯ ಪಡೆದಿದ್ದು ಏಕತೆ ಹಾಗೂ ಸೌಹಾರ್ದತೆಯನ್ನು ಖಾಯಂಗೊಳಿಸಲು. ಇಂದು ದೇಶದ ಸ್ಥಿತಿ ಹದಗೆಟ್ಟು ಹೋಗುತ್ತಿದೆ. ಮೊದಲಿಗಿಂತ ಇಂದು ದೇಶದ ಏಕತೆ ಮತ್ತು ಸೌಹಾರ್ದತೆಗಾಗಿ ಹೆಚ್ಚಾಗಿ ದುಡಿಯಬೇಕಾಗಿದೆ. ಇದಕ್ಕಾಗಿ ನಾವು ಖಾಯಂ ಆಗಿ ಚಿಂತನೆ ಮಾಡದೇ ಇದ್ದಲ್ಲಿ ಈ ದೇಶ ಛಿದ್ರ ಛಿದ್ರವಾಗುವುದು ಖಂಡಿತ'' ಎಂದರು. ಡಾ॥ ಎಜಾಸುದ್ದೀನ್‌ರವರು ಕನ್ನಡದಲ್ಲಿ ಭಾಷಣ ಮಾಡುತ್ತ ''ಯಾವ ಧರ್ಮವೂ ಸಹ ಬೇರೆಯವರನ್ನು ದ್ವೇಷಿಸುವ ಪಾಠ ಕಲಿಸುವುದಿಲ್ಲ. ಇದು ನಮ್ಮದೇ ಆದಂತಹ ತಪ್ಪು. ಇದನ್ನು ಸುಧಾರಿಸುವ ಅಗತ್ಯವಿದೆ'' ಎಂದರು. ಈ ಸಭೆಯಲ್ಲಿ ಅನೇಕ ಮುಸ್ಲಿಮೇತರ ನಾಯಕರು ಉದಾಹರಣೆಗೆ-ಶ್ರೀ ಗೋಪಾಲ್, ಶ್ರೀ ಕೃಷ್ಣಾಚಾರ್ ಮತ್ತಿತರರು ಕನ್ನಡದಲ್ಲಿ ಮಾತನಾಡಿ ಮಿಲ್ಲಿ ಕೌನ್ಸಿಲ್‌ನ ಸದುದ್ದೇಶವನ್ನು ಮೆಚ್ಚಿ, ಅದರೊಂದಿಗೆ



ಸಹಕರಿಸುವ ವಿಶ್ವಾಸ ನೀಡಿದರು. ಮೌಲಾನ ಖಾಲಿದ್ ನದ್‌ವಿ (ಅಸಿಸ್ಟೆಂಟ್ ಸೆಕ್ರೆಟರಿ, ಮಿಲ್ಲಿ ಕೌನ್ಸಿಲ್ ತುಮಕೂರು ಜಿಲ್ಲೆ)ರವರು ವಂದನಾರ್ಪಣೆ ಮಾಡಿದರು. ಜನಾಬ್ ಶಫೀಕ್ ಬೇಗ್‌ರವರು ಕಾರ್ಯಕ್ರಮ ನಡೆಸಿಕೊಟ್ಟರು.

## ಸಿರಾ

ಈ ಶುಭಯಾತ್ರೆ 3-30 ಕ್ಕೆ ನ್ಯಾಯಮೂರ್ತಿ ಸುಲ್ತಾನ್ ಹಜ್‌ರತ್ ಹೈದರ್ ಅಲಿ ಪಟ್ಟಣವಾದ ಸಿರಾ ತಲುಪಿತು. ಆಸ್ಪತ್ರೆ ಸರ್ಕಲ್‌ನಲ್ಲಿ ಸಿರಾ ನಾಗರೀಕರು ಬಹಳ ಸಮಯದಿಂದ ಕಾರವಾನನ್ನು ಸ್ವಾಗತಿಸಲು ನಿರೀಕ್ಷಿಸುತ್ತಿದ್ದರು. ಇಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಡಾ॥ ಎಜಾಸುದ್ದೀನ್ ಅಶ್ರಫಿಯವರು ''ಇಂದು ನಮ್ಮ ದೇಶಕ್ಕೆ ಬೇಕಾಗಿರುವುದು ಹಿಂದು, ಮುಸ್ಲಿಂ ಹಾಗೂ ದಲಿತರೆಲ್ಲರೂ ಹಾಲು ಸಕ್ಕರೆಯ ಹಾಗೆ ಬೆರೆತುಕೊಂಡಿರುವ ವಾತಾವರಣ. ದೇಶದಲ್ಲಿ ಯಾವುದೇ ರೀತಿಯ ಅಪ್ರಿಯ ಘಟನೆಗಳು ಆಗಲು ಅವಕಾಶ ನೀಡದೇ ಇರಿ. ಸಿರಾ ಐತಿಹಾಸಿಕ ನಗರ. ಇದನ್ನು ಏಕತಾ ಮತ್ತು ಸೌಹಾರ್ದತೆಯ ಕೇಂದ್ರ ಬಿಂದು ಮಾಡಿ'' ಎಂದರು. ಮೌಲಾನ ಮುಹಮ್ಮದ್ ಅಶ್ರಫ್ ಅಲಿರವರು ಮಾತನಾಡಿ ''ದೇಶದ ಸ್ಥಿತಿ ಬಹು ವೇಗದಿಂದ ಬದಲಾಯಿಸುತ್ತಿರುವುದೇ ಅಲ್ಲ, ಹದಗೆಟ್ಟು ಹೋಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ದೇಶದ ಎಲ್ಲ ಜನ ಜೊತೆಗೂಡಿ ಪರಿಸ್ಥಿತಿಯನ್ನು ಶಾಂತಗೊಳಿಸಬೇಕಾಗಿದೆ. ದಂಗೆ ಜಗಳಗಳಿಂದ ಜನಸಾಮಾನ್ಯರಿಗೆ ಏನೂ ಲಾಭವಿಲ್ಲ, ದೇಶಕ್ಕೂ ಲಾಭವಿಲ್ಲ ಎಲ್ಲರಿಗೂ ನಷ್ಟ ಮಾತ್ರ'' ಎಂದರು. ಈ ಶುಭಯಾತ್ರೆ ತುಮಕೂರು ಜಿಲ್ಲೆಯಿಂದ ಚಿತ್ರದುರ್ಗ ಜಿಲ್ಲೆಗೆ ಪ್ರವೇಶಿಸಿದಾಗ ಎಸ್.ಪಿ. ನಿಸಾರ್‌ರವರು ತಮ್ಮ ಜಿಲ್ಲೆಯ ಕೊನೆಯ ಸರಹದ್ದಿನಲ್ಲಿ ಕಾರವಾನಿನ ಸದಸ್ಯರನ್ನು ಬೀಳ್ಕೊಟ್ಟು ಈ ಯಾತ್ರೆಗೆ ಶುಭ ಹಾರೈಸಿದರು. ತುಮಕೂರು ಜಿಲ್ಲೆಯ ಪೋಲೀಸ್ ಸ್ಕ್ವಾಡ್ ಇಡೀ ದಿನವೆಲ್ಲ ಯಾತ್ರೆಯ ಜೊತೆಯಲ್ಲಿದ್ದು ಅದನ್ನು ಗೌರವಿಸಿತು. ಕಾರವಾನಿಗೆ ಬೀಳ್ಕೊಡುವ ಸಲಾಮಿ ನೀಡಿ ಹಿಂದಿರುಗಿತು.

## ಹಿರಿಯೂರು

ಈ ಶುಭ ಯಾತ್ರೆ ಸಂಜೆಯ ನಂತರ ಹಿರಿಯೂರು ತಲುಪಿತು. ಯಾತ್ರೆ ಇಲ್ಲಿ 5 ಘಂಟೆಗೆ ತಲುಪಬೇಕಿತ್ತು ಆದರೆ ತಡವಾಗಿ ತಲುಪಿತು. ಆದರೂ ಸಹ ಹಿರಿಯೂರಿನ ನಾಗರೀಕರು ಹಿಂದು ಮುಸ್ಲಿಂ ಕ್ರೈಸ್ತರು ಹಾಗೂ ದಲಿತರ ಒಂದು ದೊಡ್ಡ ಗುಂಪು ಯಾತ್ರೆಯನ್ನು ಸ್ವಾಗತಿಸಲು ನಿರೀಕ್ಷಿಸುತ್ತಾ ನಿಂತಿದ್ದರು. ಇಲ್ಲಿನ ಬೆಚ್ಚಿ ಬೀಳುವಂತಹ

ಸಂಗತಿ ಎಂದರೆ ನಗರದ ಬಿ.ಜೆ.ಪಿ. ಯೂನಿಟ್ ಸಹ ಸ್ವಾಗತಿಸಲು ಆಗಮಿಸಿತ್ತು. ಏಕತೆ ಮತ್ತು ಸೌಹಾರ್ದತೆಯ ಘೋಷಣೆಗಳನ್ನು ಕೂಗುತ್ತ , ರ್‍ಯಾಲಿ ನಗರದ ಪ್ರಮುಖ ಬೀದಿಗಳಲ್ಲಿ ಚಲಿಸುತ್ತ ರೋಟರಿ ರಂಗಮಂದಿರದ ಮೈದಾನ ತಲುಪಿತು. ಶ್ರೀಶ್ರೀಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು (ಚಿತ್ರದುರ್ಗ ಮಠದ ಮಹಾಸ್ವಾಮಿಗಳು) ಪೂರ್ಣ ನಾಡಿನಲ್ಲಿ ಪ್ರಸಿದ್ಧ ವ್ಯಕ್ತಿತ್ವ ಉಳ್ಳವರು. ಇಡೀ ರಾಜ್ಯದಲ್ಲೇ ಅವರನ್ನು ಹಿಂದುಗಳು ಆದರದಿಂದ ಕಾಣುತ್ತಾರೆ. ಅವರೂ ಸಹ ಎರಡು ಘಂಟೆಗಳ ಕಾಲ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಯಾತ್ರೆಯನ್ನು ನಿರೀಕ್ಷಿಸುತ್ತಿದ್ದರು. ತಡವಾಗಿ ಆಗಮಿಸಿದ್ದರ ಬಗ್ಗೆ ಅವರಲ್ಲಿ ಕ್ಷಮಾಪಣೆ ಕೇಳಿಕೊಳ್ಳಲಾಯಿತು. ಅವರು ಬಹಳ ಆದರ ಹಾಗೂ ನಗುಮುಖದಿಂದ ಕಾರವಾನಿನ ನಾಯಕರನ್ನು ಹಾಗೂ ಸದಸ್ಯರನ್ನು ಭೇಟಿ ಮಾಡಿದರು. ಮೈದಾನದಲ್ಲಿ ಹಿರಿಯೂರಿನ ನಾಗರೀಕರ ಒಂದು ದೊಡ್ಡ ಸಭೆ ಸೇರಿತ್ತು. ವೇದಿಕೆ ಮೇಲೆ ಎಲ್ಲ ಧರ್ಮಗಳ ನಿರ್ದೇಶಕರು, ರಾಜಕೀಯ ಸಾಮಾಜಿಕ ಸಂಘಟನೆಗಳ ನಾಯಕರು ಹಾಗೂ ಪ್ರತಿನಿಧಿಗಳು ಪೀಠಗಳನ್ನು ಅಲಂಕರಿಸಿದ್ದರು. ಡಾ॥ ಏಜಾಜುದ್ದೀನ್ ಸಾಹೇಬರು ಕನ್ನಡ ಭಾಷೆಯಲ್ಲಿ ಬಹಳ ಹೊತ್ತು ಮಾತನಾಡಿದರು. ಈ ಭಾಷಣ ಬಹಳ ಉಪಯುಕ್ತ ಹಾಗೂ ಪರಿಣಾಮಕಾರಿಯಾಗಿತ್ತು. ಡಾ॥ ಏಜಾಜುದ್ದೀನ್ ಸಾಹೇಬರು ಸಂಸ್ಕೃತ, ಹಿಂದಿ, ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವವರು. ಅವರು ಈ ಭಾಷೆಗಳಲ್ಲಿ ಬಹಳ ಸುಲಭವಾಗಿ ಭಾಷಣ ಮಾಡಬಲ್ಲರು. ವಿಶೇಷವಾಗಿ ಕನ್ನಡದಲ್ಲಿ ಅವರ ಭಾಷಣ ಬಹಳ ಪ್ರಭಾವಶಾಲಿ ಹಾಗೂ ಪರಿಣಾಮಕಾರಿಯಾಗಿರುತ್ತದೆ. ಅವರು ಮಾತನಾಡಿ, "ದೇಶದಲ್ಲಿ ಜನರ ನಡುವೆ ಅಸೂಯೆ, ದ್ವೇಷ ಹಾಗೂ ದೂರ ಮಾಡುವಿಕೆ–ಇವೆಲ್ಲ ಕೋಮುವಾರು ರಾಜಕೀಯ ಬೆಳವಣಿಗೆ. ಈಗ ಜಾತಿ, ಧರ್ಮ ಮತ್ತು ಪಕ್ಷಗಳನ್ನು ಬದಿಗಿಟ್ಟು ನಾವೆಲ್ಲರೂ ಒಂದೇ ಚಿಂತನೆ ಹಾಗೂ ಒಂದೇ ರೀತಿಯ ಯೋಚನೆಯನ್ನು ಮಾಡಿ ಇಡೀ ವಿಶ್ವದಲ್ಲಿ ಭಾರತದ ಹೆಸರನ್ನು ಮಿನುಗಿಸಬೇಕಾಗಿದೆ" ಎಂದರು. ಈ ರಿಫಾಯಿ ಫಕೀರ್ ಮಾತನಾಡಿ "ಸಹಸ್ರಾರು ಸೂಫಿಗಳು ಪ್ರೇಮ ಮತ್ತು ಏಕತೆಯ ಸಂದೇಶವನ್ನು ತೆಗೆದುಕೊಂಡು ಭಾರತಕ್ಕೆ ಆಗಮಿಸಿದರು. ತಮ್ಮ ಈ ಸಂದೇಶ ಹಾಗೂ ಧರ್ಮ ಪ್ರಚಾರದಿಂದ ದೇಶವನ್ನು ಶಾಂತಿಯ ತೊಟ್ಟಿಲನ್ನಾಗಿ ಮಾಡಿದರು. ಈಗ ಈ ದೇಶಕ್ಕೆ ಯಾರದೋ ದೃಷ್ಟಿಯಾಗಿದೆ. ದೇಶದಲ್ಲಿ ಉತ್ತಮ ನಡತೆಯ ಅರಾಜಕತೆಯಿದೆ. ಆದ್ದರಿಂದಲೇ ಜನಸಾಮಾನ್ಯರಲ್ಲಿ ಅಸೂಯೆ, ಅಸ್ತವ್ಯಸ್ತತೆ, ವ್ಯಾಕುಲತೆ ಉಂಟಾಗಿದೆ. ಇದಕ್ಕೆ ಮದ್ದು ಅಥವಾ ಚಿಕಿತ್ಸೆ ಒಂದೇ. ಅದು ಯಾವುದೆಂದರೆ ಸೂಫಿಯಾಗಳ ಮಾರ್ಗದಲ್ಲಿ ನಾವು ದುಡಿಯಲಾರಂಭಿಸುವುದು" ಎಂದು ಹೇಳಿದರು. ಮೌಲಾನ ಖದೀರ್ ಅಹ್ಮದ್ ಅದಾಲ್ ಅಮೀರಿ ಷಾ ಸಾಹೇಬರು ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಸಭೆಯಲ್ಲಿ ಭಾಗವಹಿಸಲು ಬೆಂಗಳೂರಿನಿಂದ ಇಂದು ಇಲ್ಲಿಗೆ ಆಗಮಿಸಿದ್ದರು. ಅವರು ಮಾತನಾಡಿ "ನಾವುಗಳೆಲ್ಲ ಸೇರಿ



ಸೌಹಾರ್ದತೆಯ ವಾತಾವರಣ ನಿರ್ಮಾಣಕ್ಕೆ ಸಂಪೂರ್ಣ ಪ್ರಯತ್ನ ಮಾಡಬೇಕು. ಇಲ್ಲದಿದ್ದರೆ ಈ ದೇಶ ನಾಶವಾಗುವುದು ಖಂಡಿತ" ಎಂದರು. ಅವರು ಮುಸ್ಲಿಂ ಬಾಂಧವರಲ್ಲಿ ಮನವಿ ಮಾಡುತ್ತ "ಸುನ್ನಿ ಅಥವ ಸುನ್ನಿಯೇತರ, ದೇವ್‌ಬಂದಿ ಅಥವಾ ಬರೇಲ್ವಿ ಪದ್ಧತಿಗಳ ಬಗ್ಗೆ ಚರ್ಚಿಸುವ ಬದಲಾಗಿ ಈಗಿನ ಪರಿಸ್ಥಿತಿಯಲ್ಲಿ ಸಹಕಾರ ಮತ್ತು ಸಲಹೆಗಳಿಂದ ದೇಶವನ್ನು ಅಸೂಯೆ, ವೈರತ್ವ, ಜಗಳ ಹಾಗೂ ರಕ್ತಪಾತಗಳಿಂದ ಸ್ವಚ್ಛಗೊಳಿಸಿ. ನಾನು ಮಿಲ್ಲಿ ಕೌನ್ಸಿಲ್‌ನ ಈ ಉದ್ದೇಶ ಮೆಚ್ಚಿ ನನ್ನ ಪೂರ್ಣ ಬೆಂಬಲ ನೀಡುತ್ತೇನೆ. ಜನಸಮೂಹ, ದೇಶಾಭಿವೃದ್ಧಿ ಹಾಗೂ ಅದರ ಪ್ರಗತಿಗಾಗಿ ಸದಾ ಮಿಲ್ಲಿ ಕೌನ್ಸಿಲ್ ಜೊತೆಯಲ್ಲಿದ್ದೇನೆ" ಎಂದರು. ಮೌಲಾನ ಮುಫ್ತಿ ಮಹಮ್ಮದ್ ಅಶ್ರಫ್ ಅಲಿ ಸಾಹೇಬರು ಮಾತನಾಡಿ "ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಯಾತ್ರೆ 13ನೇ ಡಿಸೆಂಬರ್‌ಗೆ ಬೆಂಗಳೂರಿಂದ ಹೊರಟು ಅನೇಕ ನಗರ ಹಾಗೂ ಪಟ್ಟಣಗಳಲ್ಲಿ ಏಕತೆ ಮತ್ತು ಸೌಹಾರ್ದತೆಯ ಸಂದೇಶ ನೀಡುತ್ತ ನಿಮ್ಮ ನಗರಕ್ಕೆ ಆಗಮಿಸಿದೆ. ತಾವೆಲ್ಲರೂ ಯಾತ್ರೆಗೆ ಭವ್ಯ ಸ್ವಾಗತ ನೀಡಿ, ದೊಡ್ಡ ಪ್ರಮಾಣದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿ, ಇಷ್ಟೊಂದು ಧಾರ್ಮಿಕ ಮುಖಂಡರನ್ನು ಹಾಗೂ ನಾಯಕರನ್ನು ಒಟ್ಟುಗೂಡಿಸಿದ್ದೀರಿ. ನಾನು ನಿಮಗೆ ವಂದನೆ ಅರ್ಪಿಸುತ್ತೇನೆ. ಈಗ ಮುಂದೆ ಮಾಡಬೇಕಾಗಿರುವ ಕೆಲಸವೆಂದರೆ ನೀವೆಲ್ಲರೂ ಸದಾ ಏಕತೆ ಮತ್ತು ಸೌಹಾರ್ದತೆಯ ಈ ಪ್ರದರ್ಶನವನ್ನು ಖಾಯಂಗೊಳಿಸಿ, ಅಣ್ಣ ತಮ್ಮಂದಿರ ಹಾಗೆ ಒಟ್ಟುಗೂಡಿ ನಿಮ್ಮ ಪರಿಸರವನ್ನು ಪ್ರೀತಿ ಪ್ರೇಮದಿಂದ ತುಂಬಿ" ಎಂದರು. ಜನಾಬ್ ಬಷೀರ್ ಅಹ್ಮದ್ ಅಡ್ವೊಕೇಟ್ ಮಾತನಾಡಿ "ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಸಮಯಕ್ಕೆ ಸರಿಯಾಗಿ ದೇಶದಲ್ಲಿ ಏಕತಾ ಮತ್ತು ಸೌಹಾರ್ದತಾ ಯಾತ್ರೆ ಹೊರಡಿಸಿದೆ. ಈ ಪುಣ್ಯ ಪ್ರಯತ್ನ ಎಂದಿಗೂ ವಿಫಲವಾಗುವುದಿಲ್ಲ. ಎಲ್ಲ ಜಾಗಗಳಲ್ಲಿ ಯಾತ್ರೆಯನ್ನು ಯಾವ ರೀತಿಯಲ್ಲಿ ಸ್ವಾಗತಿಸಲಾಯಿತೋ ಅದೇ ಇದರ ಯಶಸ್ಸಿಗೆ ಸಾಕ್ಷಿ" ಎಂದರು. ಸಭಾಧ್ಯಕ್ಷರಾದ ಶ್ರೀ ಶ್ರೀ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಮಹಾಸ್ವಾಮಿಗಳು ತಮ್ಮ ದೀರ್ಘ ಭಾಷಣದಲ್ಲಿ "ಧರ್ಮಸಮಾನತೆಯನ್ನು ಪ್ರೋತ್ಸಾಹಿಸಿ, ಸಮಾಜದಲ್ಲಿ ಹರಡಿಕೊಂಡಿರುವ ಕೆಟ್ಟ ಹವ್ಯಾಸಗಳನ್ನು ಕೊನೆಗೊಳಿಸಿ, ಆತಂಕವಾದ ಹಾಗೂ ಭಯೋತ್ಪಾದಕರ ಕೆಡಕು ಕೆಲಸಗಳಿಂದ ದೇಶವನ್ನು ಕಾಪಾಡುವುದೇ ಇಂದಿನ ಮುಖ್ಯ ಕಾರ್ಯ. ಈ ಕೆಲಸ ನೀವು ನಿಮ್ಮ ಸ್ಥಾನೀಯ ಮಟ್ಟದಲ್ಲಿ ಹಾಗೂ ರಾಷ್ಟ್ರಮಟ್ಟದಲ್ಲೂ ಸಹ ನಿರಂತರವಾಗಿ ಮಾಡುತ್ತಲೇ ಇರಬೇಕು. ನಮ್ಮಲ್ಲಿ ಕೆಟ್ಟ ಹವ್ಯಾಸಗಳು ಅಥವಾ ಕೆಡಕು ಎಷ್ಟರ ಮಟ್ಟಕ್ಕೆ ಬೇರು ಹಿಡಿದಿದೆ ಎಂದರೆ ಸ್ವಲ್ಪ ಶ್ರಮದಿಂದ ಅವುಗಳನ್ನು ಕೀಳಲು ಸಾಧ್ಯವಿಲ್ಲ. ಆ ಬೇರುಗಳನ್ನು ಕೀಳಬೇಕಾದರೆ ತುಂಬ ಪ್ರಯತ್ನ ಹಾಕಿ ಬಹಳಷ್ಟು ಶಕ್ತಿ ಪ್ರಯೋಗ ಮಾಡಬೇಕಾಗುತ್ತದೆ. ಏಕತೆ ಮತ್ತು ಸೌಹಾರ್ದತೆಯ ಈ ಕೆಲಸಕ್ಕೆ ನಾವು ನಮ್ಮ ಕೈಲಾದಷ್ಟು ಸೇವೆ ಮಾಡಲು ಸದಾ ಸಿದ್ಧರಾಗಿದ್ದೇವೆ" ಎಂದರು. ಕ್ರೈಸ್ತರು, ದಲಿತರು ಹಾಗೂ ಅನೇಕ ರಾಜಕೀಯ ಪಕ್ಷದ

ಮುಖಿಂಡರೂ ಸಭೆಯನ್ನುದ್ದೇಶಿಸಿ ಮಾತನಾಡಿದರು. ಹಿರಿಯೂರಿನ ರ್‍ಯಾಲಿ ಮತ್ತು ಬಹಿರಂಗ ಸಭೆಯ ವಿಭಿನ್ನ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಜನಾಬ್ ಶಫೀಉಲ್ಲಾ ಸಾಹೇಬ್ ಹಾಗೂ ತನ್‌ಜೀಮ್‌ನ ಯುವಕರು ಬಹಳ ಶ್ರಮಪಟ್ಟಿದ್ದರು. ಅಲ್ಲಾಃ ತಆಲಾ ಅವರಿಗೆ ಇದರ ಪುಣ್ಯ ಫಲ ನೀಡಲಿ, ಆಮೀನ್.

## 15-12-95: ದಾವಣಗೆರೆಯಿಂದ ಹುಬ್ಬಳ್ಳಿಯವರೆಗೆ

### ದಾವಣಗೆರೆ

ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಏಕತಾ ಮತ್ತು ಸೌಹಾರ್ದತಾ ಯಾತ್ರೆ 15-12-95 ಬೆಳಗ್ಗೆ 10-30 ಕ್ಕೆ ದಾವಣಗೆರೆ ತಲಪಿತು. ಜನಾಬ್ ಸೈಯದ್ ಸೈಫುಲ್ಲಾ ಸಾಹೆಬ್ (ಸೆಕ್ರಟರಿ, ಮಿಲ್ಲಿ ಕೌನ್ಸಿಲ್ ಚಿತ್ರದುರ್ಗ ಜಿಲ್ಲೆ)ರವರ ನೇತೃತ್ವದಲ್ಲಿ ಹಿಂದು ಮುಸ್ಲಿಂರ ಒಂದು ದೊಡ್ಡ ಗುಂಪು ಕಾರವಾನಿನ ಸ್ವಾಗತ ಬಯಸಲು ಬಂದಿತ್ತು. ಕಾರವಾನಿನ ಸದಸ್ಯರಿಗೆ ಮಾಲಾರ್ಪಣೆ ಮಾಡಿದ ನಂತರ ನಗರದ ಪ್ರಮುಖ ಬೀದಿಗಳಲ್ಲಿ ರ್‍ಯಾಲಿ ಹೊರಟಿತು. ಕನ್ನಡ ಹಾಗೂ ಉರ್ದು ಭಾಷೆಗಳಲ್ಲಿ "ಏಕತಾ ಮತ್ತು ಸೌಹಾರ್ದತೆಯ ಕಾರವಾನ್ ಜಿಂದಾಬಾದ್, ಹಿಂದು ಮುಸ್ಲಿಂ ಸಿಖ್ ಈಸಾಯಿ ನಾವೆಲ್ಲರೂ ಅಣ್ಣ ತಮ್ಮಂದಿರು" ಇತ್ಯಾದಿ ಘೋಷಣೆಗಳಿಂದ ಸಡಗರ ಹಾಗೂ ವೈಭವದಿಂದ ಈ ರ್‍ಯಾಲಿ ನಗರದ ಮಧ್ಯದಿಂದ ಹೊರಟು ರಂಗಮಂಟಪ ಮೈದಾನ ತಲುಪಿ ಬಹಿರಂಗಸಭೆಯಾಗಿ ಬದಲಾಯಿತು. ಇಲ್ಲಿಯೂ ಸಹ ಪೋಲೀಸ್ ದಸ್ತೆ ಕಾರವಾನ್ ಹಾಗೂ ರ್‍ಯಾಲಿ ಜೊತೆಯಲ್ಲಿತ್ತು. ಕಾರವಾನಿನ ಸದಸ್ಯರಲ್ಲಿ ಡಾ॥ ಏಜಾಸುದ್ದೀನ್ ಸಾಹೆಬ್, ಮೌಲಾನ ಮುಫ್ತಿ ಅಶ್ರಫ್ ಅಲಿ ಮತ್ತು ಬಷೀರ್ ಅಹ್ಮದ್ ಸಾಹೇಬ್ ಅಡ್ವೊಕೇಟ್‌ರವರು ಭಾಷಣ ಮಾಡಿ "ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ದೇಶದಲ್ಲಿ ಕೋಮು ಸೌಹಾರ್ದತೆ , ಸರ್ವ ಧರ್ಮ ಸಮಾನತೆ, ಜಾತಿ ಬಣ್ಣ ವಂಶ ಭಾಷೆ ಹಾಗೂ ಕ್ಷೇತ್ರಗಳಿಂದ ಮೇಲೆದ್ದು ಏಕತೆ ಹಾಗೂ ಸೌಹಾರ್ದತೆಗಾಗಿ ಎಲ್ಲ ರಾಜ್ಯಗಳ ಮಿಲ್ಲಿ ಕೌನ್ಸಿಲ್‌ಗಳಿಗೆ ತಮ್ಮ ತಮ್ಮ ರಾಜ್ಯಗಳಲ್ಲಿ ಏಕತಾ ಮತ್ತು ಸೌಹಾರ್ದತೆಯ ಯಾತ್ರೆ ಹೊರಡಲು ಕರೆ ಕೊಟ್ಟಿದೆ. ಅದರಂತೆ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಯಾತ್ರೆ ರಾಜ್ಯದ ಅನೇಕ ನಗರ ಹಾಗೂ ಪಟ್ಟಣಗಳಿಂದ ಹೊರಟು ಇಂದು ನಿಮ್ಮ ನಗರ ದಾವಣಗೆರೆಗೆ ಬಂದಿದೆ. ತಾವೆಲ್ಲರೂ ನಮಗೆ ಹೃದಯಪೂರ್ವಕ ಸ್ವಾಗತ ಬಯಸಿದ್ದೀರಿ. ಇದು ಕಾರವಾನಿನ ಯಶಸ್ಸಿಗೆ ಸಾಕ್ಷಿ. ಈಗ ಮುಂದೆ ತಾವೆಲ್ಲರೂ ಬರೀ ಈ ನಗರವೇ ಅಲ್ಲ ಇಡೀ ಚಿತ್ರದುರ್ಗ ಜಿಲ್ಲೆಯಲ್ಲಿ ಏಕತೆ ಮತ್ತು ಸೌಹಾರ್ದತೆಯ ವಾತಾವರಣ ಸದಾ ಹೀಗೆ ಕಾಪಾಡಿಕೊಂಡು ಬರಲು ಶ್ರಮಿಸಬೇಕು" ಎಂದರು. ದಾವಣಗೆರೆ ನಗರದ ಪರವಾಗಿ, ಹಿಂದು ಮುಸ್ಲಿಂ ಮತ್ತು ದಲಿತನಾಯಕರ ಪರವಾಗಿ ಭಾಷಣಗಳನ್ನು



ಮಾಡಿದವರಲ್ಲಿ ಶ್ರೀ ಶಿವಣ್ಣ, ಶ್ರೀ ಸಿದ್ದಪ್ಪ ಮತ್ತಿತರರೆಲ್ಲರೂ ಕೇವಲ ದಾವಣಗೆರೆ ನಗರವೇ ಅಲ್ಲ ಇಡೀ ಚಿತ್ರದುರ್ಗ ಜಿಲ್ಲೆಯಲ್ಲೇ ಶಾಂತಿ ಹಾಗೂ ಸೌಹಾರ್ದತೆ ವಾತಾವರಣ ಕಾಪಾಡಿಕೊಂಡು ಬರಲು ಅವರಲ್ಲಿ ಲಭ್ಯವಾಗುವ ಎಲ್ಲ ಸಾಧನಗಳು ಹಾಗೂ ಪೂರ್ಣ ಶಕ್ತಿಯನ್ನು ಈ ಕೆಲಸಕ್ಕೆ ಅರ್ಪಿಸಿ, ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯಲು ಆಸ್ಪದ ಕೊಡುವುದಿಲ್ಲ ಎಂದು ಕಾರವಾನಿಗೆ ಆಶ್ವಾಸನೆ ನೀಡಿದರು. ನಗರದ ಅನೇಕ ಸಂಘ ಸಂಸ್ಥೆಗಳಿಂದ ಈ ಸಭೆಯಲ್ಲಿ ಕಾರವಾನಿನ ಸದಸ್ಯರೆಲ್ಲರಿಗೂ ಮಾಲಾರ್ಪಣೆ ಮಾಡಲಾಯಿತು.

### ಹುಬ್ಬಳ್ಳಿ

13-12-95ರ ಬೆಳಗ್ಗೆ ಮಹಾ ಪಾಂಡಿತ್ಯವುಳ್ಳ ಪಂಡಿತರು, ಮೇಧಾವಿಗಳು, ರಾಜಕೀಯ ಸಾಮಾಜಿಕ ಗಣ್ಯರು, ವಿದ್ಯಾರ್ಥಿ ಸಂಘಗಳ ನಾಯಕರು, ಶಿಕ್ಷಣ ಹಾಗೂ ಪತ್ರಿಕೋದ್ಯಮದಲ್ಲಿ ಕೆಲಸ ಮಾಡುತ್ತಿರುವ ಅನೇಕ ವ್ಯಕ್ತಿಗಳ ಮೇಲೆ ಆಧಾರಿತವಾದ ಏಕತಾ ಹಾಗೂ ಸೌಹಾರ್ದತೆಯ ಈ ಕಾರವಾನ್ ಬೆಂಗಳೂರಿಂದ ಹೊರಟು ರಾಜ್ಯದ ಅನೇಕ ನಗರಗಳಲ್ಲಿ ತನ್ನ ಸಂದೇಶವನ್ನು ಕೊಡುತ್ತಾ 15-12-95ಕ್ಕೆ ದಾವಣಗೆರೆ ನಗರದಲ್ಲಿ ತನ್ನ ಕಾರ್ಯ ಮುಗಿಸಿದ ನಂತರ ಸಂಜೆ ವೇಳೆಗೆ ಹುಬ್ಬಳ್ಳಿ ತಲುಪಿತು. ಈ ಮಧ್ಯದಲ್ಲಿ ಈ ಕಾರವಾನ್ ಯಾವ ಯಾವ ನಗರಕ್ಕೆ ಭೇಟಿಕೊಟ್ಟಿತ್ತೋ ಅಲ್ಲೆಲ್ಲ ಆದರದ ಸ್ವಾಗತ ಬಯಸಲಾಯಿತು. ಇಂದು ನಮ್ಮ ರಾಜ್ಯ ಹಾಗೂ ದೇಶದ ಸ್ಥಿತಿಯಲ್ಲಿ ನಂಬಲಾರದಂತಹ ರೀತಿಯಲ್ಲಿ ಹಿಂದುಗಳು, ದಲಿತರು, ಕ್ರೈಸ್ತರು ಹಾಗು ಮುಸ್ಲಿಮರು ತಮ್ಮ ಹರ್ಷ ಉಲ್ಲಾಸ ವ್ಯಕ್ತಪಡಿಸಿದ್ದನ್ನು ನೋಡಿದರೆ ದೇಶದ ಜನರೆಲ್ಲ ಧಾರ್ಮಿಕ, ರಾಜಕೀಯ ಹಾಗೂ ಸಾಮಾಜಿಕ ಅನ್ಯಾಯಗಳ ವಿರುದ್ಧ ನಿಂತು ಒಂದು ಹೊಸ ಸ್ವಾತಂತ್ರ್ಯದ ಯುದ್ಧಮಾಡಲು ಸಿದ್ಧರಾಗಿದ್ದಾರೆಂದು ತಿಳಿಯುತ್ತಿತ್ತು. ಬಹುಶಃ ಮಿಲ್ಲಿ ಕೌನ್ಸಿಲ್‌ನ ಈ ಕಾರವಾನ್ ಅವರ ಕನಸನ್ನು ನನಸು ಮಾಡುತ್ತಿತ್ತು. ಆದ್ದರಿಂದಲೇ ಅವರು ಈ ಪುಣ್ಯಕಾರ್ಯದ ಕಡೆ ಮೋಹಿತರಾಗಿ ಓಡಿಬಂದರು. ಈ ಶುಭಕಾರವಾನ್ ಪ್ರತಿಯೊಂದು ಜನಜಂಗುಳಿಯಲ್ಲಿ

ಕಾರವಾನ್ ಆಗಿ ಹೊರಡಿ,ಕಾರವಾನ್ ತೆಗೆದುಕೊಂಡು ಹೊರಡಿ

ಗೆಳೆಯರೇ ಹೆಜ್ಜೆ ಮುಂದಿಡಿ, ಮತ್ತೊಂದು ಹೆಜ್ಜೆ ಮುಂದಿಡೀ ಗೆಳೆಯರೇ

ಕಾರವಾನ್ ಹೊರಟಿದೆ, ಕಾರವಾನ್ ಹೋಗುತ್ತಿದೆ

ಏಕತೆ ಇದೇ ನಮ್ಮ ಗುರುತು, ಒಗ್ಗಟ್ಟಿಗೆ ಇದೇ ನಮ್ಮಗುರುತು

ಇದು ಸರಿಸಮಾನತೆಯ ದಾರಿ, ಇದೇ ಪ್ರತಿಫಲದ ದಾರಿ

ಏಕತೆ ಮತ್ತು ಸೌಹಾರ್ದತೆಯಲ್ಲೇ ಎಲ್ಲರಿಗೂ ಮುಕ್ತಿ

ದಾರಿಹೋಕರೆ ಮುಂದೆ ನಡೆಯಿರಿ, ದಾರಿ ತೋರುವವರೇ ಮುಂದೆ ನಡೆಯಿರಿ

ಇದೇ ಕ್ರಾಂತಿಯ ದಾರಿ, ಇದೇ ಕ್ರಾಂತಿಯ ದಾರಿ

ನಡೆ ಮುಂದೆ, ನಡೆ ಮುಂದೆ, ನಡೆ ಮುಂದೆ, ಮುನ್ನುಗ್ಗಿ ನಡೆ ಮುಂದೆ

ಈ ಹಾಡುಗಳನ್ನು ಹಾಡುತ್ತ ಮುಂದೆ ಸಾಗಿತು. ಈ ಕಾರವಾನು ಎಲ್ಲೆಲ್ಲಿ ಹೋಗುತ್ತಿತ್ತೋ ಅಲ್ಲಿ ರ್‍ಯಾಲಿಗಳಿಂದ ಹರ್ಷ ಉಲ್ಲಾಸ ತುಂಬುವಂತಹ, ಯೋಚಿಸುವಂತಹ, ಕ್ರಾಂತಿಕಾರಿ ಹಾಗೂ ಸುಧಾರಣೆಯ ಘೋಷಣೆಗಳನ್ನು ಧ್ವನಿವರ್ಧಕಗಳಿಂದ ಕನ್ನಡ ಹಾಗೂ ಉರ್ದು ಭಾಷೆಗಳಲ್ಲಿ ಕೂಗುತ್ತ ಹೊರಟಿತು. ಲಕ್ಷಾಂತರ ಜನ ಇದನ್ನು ಕೇಳಿ ಪ್ರಭಾವಿತರಾದರು.

ಒಬ್ಬ ಭಗವಂತನ ಸೃಷ್ಟಿ ನಾವು! ಒಬ್ಬನೇ ಮೂಲ ಪುರುಷ (ಆದಂ)ರ ಸಂತಾನ ನಾವು. ಮತ್ತೇಕೆ ಈ ದ್ವೇಷ?

ಬನ್ನಿರಿ! ದ್ವೇಷ ಅಸೂಯೆಯ ಗೋಡೆ ಬೀಳಿಸಿ, ಪ್ರೀತಿ ವಿಶ್ವಾಸದ ಹಾಡು ಹಾಡೋಣ.

ಬನ್ನಿರಿ! ಜಾತಿ ಮತ ಮೇಲುಕೀಳನ್ನು ಬದಿಗಿಟ್ಟು, ಹೊಸ ಸಮಾಜ ನಿರ್ಮಿಸೋಣ ಬನ್ನಿರಿ. ಧರ್ಮ ಸಂಕೀರ್ಣತೆ ಮತ್ತು ಮಾನವ ಶತ್ರುತ್ವದ ಗುಂಪುಗಳ ವಿರೋಧದಲ್ಲಿ ಹೊಸ ಸ್ವಾತಂತ್ರ್ಯದ ಡಿಂಡಿಮ ಬಾರಿಸೋಣ.

ಬನ್ನಿರಿ! ಅನ್ಯಾಯ, ಅಕ್ರಮ, ಅಧರ್ಮವನ್ನು ಅಳಿಸೋಣ ಮತ್ತು ನ್ಯಾಯ, ನೀತಿ, ಧರ್ಮಬದ್ಧ ಕಾನೂನು ಸ್ಥಾಪಿಸೋಣ!!

ಎಲ್ಲಾ ನಗರ ಹಾಗೂ ಪಟ್ಟಣಗಳಲ್ಲಿ ಹೊರಟಿದ್ದ ರ್‍ಯಾಲಿಗಳಲ್ಲಿ ಮುಸ್ಲಿಂ, ಹಿಂದು ಹಾಗೂ ದಲಿತರು ಬ್ಯಾನರ್‌ಗಳನ್ನು ಎತ್ತಿಕೊಂಡಿದ್ದರು. ಅದರ ಮೇಲೆ ಕನ್ನಡ ಹಾಗೂ ಉರ್ದು ಭಾಷೆಗಳಲ್ಲಿ ಮೇಲ್ಕಂಡ ಘೋಷಣೆ ಬರೆಯಲಾಗಿತ್ತು. ಅನೇಕ ಸಂಘ ಸಂಸ್ಥೆಗಳಿಂದ ನಗರ ಹಾಗೂ ಪಟ್ಟಣಗಳಲ್ಲಿ ಇದೇ ವಿಷಯದ ಬ್ಯಾನರ್ಸ್ ಕಟ್ಟಲಾಗಿತ್ತು. ಭಿತ್ತಿಪತ್ರಗಳಲ್ಲೂ ಇದನ್ನು ಮುದ್ರಿಸಲಾಗಿತ್ತು.

ಈ ಶುಭಕಾರವಾನ್ ಹಜ್‌ರತ್ ದೀವಾನ್ ಬಾಬಾ ದರ್ಗಾಕ್ಕೆ ಆಗಮಿಸಿದಾಗ ಮೌಲಾನ ಮಹಮ್ಮದ್ ಇಸ್ಮಾಯಿಲ್ ಖಾಸ್‌ಮಿ (ಸೆಕ್ರೆಟರಿ, ಮಿಲ್ಲಿ ಕೌನ್ಸಿಲ್ ಕರ್ನಾಟಕ) ಹಾಗೂ ಹಾಜಿ ಅಹ್ಮದ್ ಅತ್ತಾರ್ ಸಾಹೆಬ್ (ಸೆಕ್ರೆಟರಿ, ಮಿಲ್ಲಿಕೌನ್ಸಿಲ್ ಹುಬ್ಬಳ್ಳಿ ಜಿಲ್ಲೆ)ರವರ ನೇತೃತ್ವದಲ್ಲಿ ಹುಬ್ಬಳ್ಳಿ ನಾಗರೀಕರು ಯಾತ್ರೆಯ ಸ್ವಾಗತ ಬಯಸಿದರು. ಸಂಜೆ ನಮಾಜ್ ನಂತರ ಬೃಹತ್‌ರ್‍ಯಾಲಿ ಹೊರಟಿತು. ನಗರದ ಹೆದ್ದಾರಿಯ ಮಾರ್ಗವಾಗಿ ಮುಸ್ಲಿಂ



ಹಾಗೂ ಮುಸ್ಲಿಮೇತರ ಮೊಹಲ್ಲಾಗಳ ದಾರಿಗಳಲ್ಲಿ ಏಕತೆ ಮತ್ತು ಸೌಹಾರ್ದತೆಯ ಘೋಷಣೆಗಳನ್ನು ಕೂಗುತ್ತ ಟೌನ್‌ಹಾಲ್ ತಲುಪಿತು. ಇಲ್ಲಿಯೂ ಸಹ ಒಳ್ಳೆ ಪೊಲೀಸ್ ಬಂದೋಬಸ್ತನ್ನು ರ್‍ಯಾಲಿಗಾಗಿ ಮಾಡಲಾಗಿತ್ತು. ಟೌನ್‌ಹಾಲ್‌ನಲ್ಲಿ ಸೇರಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಡಾ॥ಏಜಾಸುದ್ದೀನ್ ಸಾಹೆಬ್, "ವಂಶ, ಭಾಷೆ, ಬಣ್ಣಗಳ ಭೇದಭಾವ ದೈವೇಚ್ಛೆ ಹಾಗೂ ಅವನ ಮಂತ್ರಾಲೋಚನೆ. ಇವುಗಳು ಮಾನವೀಯ ಶ್ರೇಷ್ಠತೆಯ ಪರೀಕ್ಷಣ ಅಲ್ಲ. ಇದು ಕೇವಲ ಮಾನವರನ್ನು ಪರಸ್ಪರ ಗುರುತಿಸಲು ಮಾತ್ರ. ಈ ಆಧಾರಗಳ ಮೇಲೆ ಗಲಭೆ ಮಾಡುವ ಅವಶ್ಯಕತೆ ಇಲ್ಲ. ಎಲ್ಲ ಮಾನವರು ದೈವೇಚ್ಛೆ ಮೇಲೆ ನಡೆಯಬೇಕು. ಅವನ ಆಜ್ಞೆಗಳನ್ನು ಪರಿಪಾಲಿಸಬೇಕು. ಒಂದೇ ಒಂದು ಪ್ರಹಸದ ಮೇಲೆ ಎಲ್ಲ ವಿಭಿನ್ನತೆಗಳು ಒಂದೇ ಸಲ ಮುಗಿದು ಹೋಗುತ್ತವೆ" ಎಂದರು. ಜನಾಬ್ ಬಶೀರ್ ಅಹ್ಮದ್ ಅಡ್ವೊಕೇಟ್‌ರವರು ಮಾತನಾಡಿ "ಧರ್ಮಬೋಧನೆಗಳನ್ನು ಮರೆತಿರುವ ಕಾರಣದಿಂದ ಇಂದು ಮಾನವರು ಮಾನವೀಯತೆಯ ಉಡುಪಿನಿಂದ ಹೊರಬೀಳುತ್ತಿದ್ದಾರೆ. ಎಲ್ಲ ಧರ್ಮಗಳ ನಾಯಕರು, ವ್ಯವಸ್ಥಾಪಕರು ತಮ್ಮ ತಮ್ಮ ಜನಾಂಗದವರಲ್ಲಿ ಧರ್ಮ ಸಮಾನತೆ, ಮಾನವ ಸ್ನೇಹವನ್ನು ಪ್ರೋತ್ಸಾಹಿಸಲು ಮುಂದೆ ಬರಬೇಕು" ಎಂದರು. ಕಾರವಾನಿನ ಮುಖ್ಯಸ್ಥರಾದ ಮುಫ್ತಿ ಮುಹಮ್ಮದ್ ಅಶ್ರಫ್ ಅಲಿರವರು ಮಾತನಾಡಿ "ಮುಸ್ಲಿಮರು ಕಲೆಮ ಯೆ ತಯ್ಯಬ ಬುನಾದಿ ಮೇಲೆ ಒಗ್ಗಟ್ಟಾಗಿ ದೇಶದಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಬರಲು ದೇಶಬಾಂಧವರೆಲ್ಲರನ್ನೂ ಜೊತೆಗೂಡಿಸಿಕೊಳ್ಳಬೇಕು. ಮುಸ್ಲಿಂ ಮುಸ್ಲಿಮೇತರ ಭೇದಭಾವವನ್ನು ದೂರ ಮಾಡಬೇಕು" ಎಂದರು. ಈ ರಿಫಾಯಿ ಫಖೀರ್ ಮಾತನಾಡಿ "ಈ ದೇಶ ಕಟ್ಟಲು, ಅದನ್ನು ದುರಸ್ತಿಗೊಳಿಸಿ ಸುಧಾರಿಸಲು ಔಲಿಯಾ ಹಾಗೂ ಪುಣ್ಯಪುರುಷರು, ಪೂರ್ವಜರೆಲ್ಲರೂ ಬಲಿದಾನ ಮಾಡಿದ್ದಾರೆ, ಅದಕ್ಕಾಗಿ ದುಡಿದಿದ್ದಾರೆ. ಆದ್ದರಿಂದ ಅವರ ಈ ಮಿಶನ್ ಪೂರ್ಣಗೊಳಿಸುತ್ತ ಈ ದೇಶವನ್ನು ಕೆಡುವುದರಿಂದ, ಹಾಳಾಗುವುದರಿಂದ, ಗಲಭೆಗಳಿಂದ ರಕ್ಷಿಸಬೇಕು" ಎಂದರು. ಮುಸ್ಲಿಮೇತರ ಭಾಷಣಕಾರರಲ್ಲಿ ಶ್ರೀ ಪಿ. ಎಸ್. ಧರ್ಮಪ್ಪನವರ್, ಪದ್ಮಶ್ರೀ ಆರ್. ವಿ. ಪಾಟೀಲ್ ಮತ್ತಿತರರು ಮಾತನಾಡಿ ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್‌ನ ಗುಣಗಾನ ಮಾಡುತ್ತ "ಪರಸ್ಪರ ಧಾರ್ಮಿಕ, ರಾಜಕೀಯ ವೈಮನಸ್ಸು, ಸೆಳೆತ, ಸ್ವಾರ್ಥದ ಈ ಕಾಲದಲ್ಲಿ ಒಂದು ಸರಿಯಾದ ಕ್ರಾಂತಿಕಾರಿ ಹೆಜ್ಜೆ ಇಟ್ಟು ಇಡೀ ದೇಶದಲ್ಲಿ ಯಾತ್ರೆ ಹೊರಡಿಸಿದ್ದಾರೆ, ಇದು ಏಕತೆ ಹಾಗೂ ಸೌಹಾರ್ದತೆಯ ಉದ್ದೇಶಕ್ಕಾಗಿ. ಇದು ಕೇವಲ ಲಾಭದಾಯಕವೇ ಅಲ್ಲ, ಬಹಳ ಸಹಾಯಕಾರಿಯೂ ಆಗುತ್ತದೆ ಎಂದರು. ಈ ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ದೀನಬಂಧು ಹಳ್ಳಿಕೇರಿ (ಚೇರ್ಮನ್, ಸದ್ಭಾವನಾ ಸಮಿತಿ, ಹುಬ್ಬಳ್ಳಿ)ರವರು ಮಾತನಾಡಿ "ಏಕತೆ ಮತ್ತು ಸೌಹಾರ್ದತೆಗಾಗಿ ಮಿಲ್ಲಿ ಕೌನ್ಸಿಲ್‌ನ ಯಾತ್ರೆಯಿಂದ ನಮಗೆ ಹೊಸ ದಿಶೆ ಹಾಗು ಹೊಸ ಮಾರ್ಗಗಳು ಸಿಕ್ಕಿವೆ. ಅದರ ಬೆಳಕಿನಲ್ಲಿ ನಾವು ಹುಬ್ಬಳ್ಳಿ ನಗರ ಹಾಗೂ ಜಿಲ್ಲೆಯಲ್ಲಿ

ಸೌಹಾರ್ದತೆಗಾಗಿ ಕೆಲಸ ಮಾಡುತ್ತೇವೆ'' ಎಂದರು. ಮೌಲಾನ ಮುಹಮ್ಮದ್ ಇಸ್ಮಾಯಿಲ್ ಸಾಹೇಬರು ಸಭೆಯ ಸ್ವಾಗತ ಹಾಗೂ ವಂದನಾರ್ಪಣೆ ಮಾಡಿದರು. ಹುಬ್ಬಳ್ಳಿಯಲ್ಲಿ ಈ ಕಾರ್ಯ ಯಶಸ್ವಿಗೊಳಿಸಲು ಮೌಲಾನರವರು ಹಾಗೂ ಹಾಜಿ ಅಹ್ಮದ್ ಅತ್ತಾರ್ ಸಾಹೇಬರು, ಸ್ಥಳೀಯ ಸ್ವಾಗತ ಸಮಿತಿ ಸದಸ್ಯರು ಬಹಳ ಶ್ರಮ ವಹಿಸಿದ್ದರು. ಅಲ್ಲಾಃತ ಆಲಾ ಅವರಿಗೆ ಇದರ ಪುಣ್ಯಫಲ ನೀಡಲಿ, ಆಮೀನ್.

## 16-12-95 : ಬೆಳಗಾಂ

ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಏಕತೆ ಮತ್ತು ಸೌಹಾರ್ದತೆಯ ಈ ಯಾತ್ರೆ 16-12-95ರ ಬೆಳಗ್ಗೆ 11-00 ಘಂಟೆಗೆ ಬೆಳಗಾಂ ನಗರದ ಸರಹದ್ದಿನಲ್ಲಿ ಪ್ರವೇಶಿಸಿತು. ಇದು ಮಿಲ್ಲಿ ಕೌನ್ಸಿಲ್ ಕರ್ನಾಟಕದ ಏಕತೆ ಮತ್ತು ಸೌಹಾರ್ದತಾ ಯಾತ್ರೆಯ ಮೊದಲನೆಯ ಹಂತದ ಕೊನೇ ಸ್ಥಳ. ನಗರದ ಸರಹದ್ದಿನ ಪ್ರಾರಂಭದಲ್ಲಿ ಗಾಂಧಿನಗರದ ಕೋಟೆ ಬಳಿ ಹುಬ್ಬಳ್ಳಿ ನಗರದ ನಾಗರೀಕರಾದ ಮೌಲಾನ ಮುಫ್ತಿ ಅಬ್ದುಲ್ ಅಜೀಜ್ ಸಾಹೆಬ್ (ಸೆಕ್ರೆಟರಿ, ಮಿಲ್ಲಿ ಕೌನ್ಸಿಲ್, ಬೆಳಗಾಂ ಜಿಲ್ಲೆ)ರವರ ನೇತೃತ್ವದಲ್ಲಿ ಬೆಳಗಾಂ ನಾಗರೀಕರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಿ ಬೆಳಗ್ಗೆ 9-00 ಘಂಟೆಯಿಂದಲೇ ಕಾರವಾನನ್ನು ನಿರೀಕ್ಷಿಸುತ್ತಿದ್ದರು. ಆಕಾಶವೇ ಬಿರುಕು ಬಿಡುವಂತಹ ಘೋಷಣೆಗಳಿಂದ ಕಾರವಾನಿನ ಸ್ವಾಗತ ಮಾಡಲಾಯಿತು. ಇಂದು ಬೆಳಗಾಂ ನಗರದ ಸಂತೆ ದಿನ. ಆದರೆ ಕಾರವಾನಿನ ಸ್ವಾಗತ ಹಾಗೂ ರ್‍ಯಾಲಿ ಮತ್ತು ಬಹಿರಂಗ ಸಭೆಗಾಗಿ ಇಂದು ಸಂತೆಯನ್ನು ಮುಚ್ಚಲಾಗಿತ್ತು. ಬೆಳಗಾಂ ರ್‍ಯಾಲಿ ಎಷ್ಟೋ ಕಿಲೋ ಮೀಟರ್‌ಗಳಷ್ಟು ಹರಡಿಕೊಂಡಿದ್ದು ಇಂತಹ ಬೃಹತ್ ರ್‍ಯಾಲಿ ಕಾರವಾನ್‌ಗೆ ಇಲ್ಲಿಯವರಿಗೆ ನೋಡಲು ಸಿಕ್ಕಿರಲಿಲ್ಲ. ಇದರ ಪ್ರಾರಂಭದಲ್ಲಿ ನಡೆದುಕೊಂಡು ಬರುವವರ ಬೃಹತ್ ಗುಂಪು, ಇದರ ಹಿಂದೆ ಸೈಕಲ್‌ಗಳ ಸಾಲುಗಳು, ನಂತರ ದ್ವಿಚಕ್ರ ವಾಹನಗಳು, ಮೋಟಾರ್ ಸೈಕಲ್ ಸ್ಕೂಟರ್‌ಗಳು, ಇದರ ಹಿಂದೆ ಮೂರು ಚಕ್ರ ವಾಹನಗಳಾದ ಆಟೋರಿಕ್ಷಾಗಳು,ಕೊನೆಯಲ್ಲಿ ಕಾರುಗಳ ಸಾಲು. ಎಲ್ಲಿಂದ ಎಲ್ಲಿಯವರೆಗೆ ದೃಷ್ಟಿಹಾಯಿಸಿದರೂ ಹುರಿದುಂಬಿಸುವಂತಹ ರ್‍ಯಾಲಿ ದೃಶ್ಯ. ಆಕಾಶವನ್ನೇ ಬಿರುಕುಗೊಳಿಸುವಂತಹ ಘೋಷಣೆಗಳೊಡನೆ ಉರಿಬಿಸಿಲಿಗೂ ಜಗ್ಗದೇ ತುಂಬ ಶಿಸ್ತಿನಿಂದ ರ್‍ಯಾಲಿ ಮೆಲ್ಲ ಮೆಲ್ಲನೇ ಲಹರೀ ಬಾದೇಶಾಃ ದರ್ಗಾ ಮೈದಾನದ ಕಡೆ ಸಾಗಿತು. ಎಷ್ಟೋ ಘಂಟೆಗಳ ನಂತರ ಈ ಉತ್ಸಾಹಿ ಬೃಹತ್ ರ್‍ಯಾಲಿಯನ್ನು ಅಲ್ಲಾಃರವರು ಸುರಕ್ಷತೆಯಿಂದ ಸಭೆಯ ಜಾಗಕ್ಕೆ ತಲುಪಿಸಿದರು. ಮೌಲಾನ ಮುಫ್ತಿ ಅಬ್ದುಲ್ ಅಜೀಜ್ ಸಾಹೇಬರು ರ್‍ಯಾಲಿಯ ಒಂದುಕಡೆ, ಮತ್ತೊಂದು ಕಡೆ ಕಾರ್ವಾನಿನ ಮುಖ್ಯಸ್ಥರಾದ ಹಜ್‌ರತ್ ಮುಹಮ್ಮದ್ ಅಶ್ರಫ್ ಅಲಿರವರು ಓಡಾಡಿಕೊಂಡು ರ್‍ಯಾಲಿಯ ಜೊತೆಗಿದ್ದರು.



ಉತ್ಸಾಹ ತುಂಬಿ ತುಳುಕುತ್ತಿದ್ದ ಈ ರ್‍ಯಾಲಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಮಕ್ಕಳು ವೃದ್ಧರು ಹಾಗೂ ಯುವಕರು ಪಾಲುಗೊಂಡಿದ್ದರು. ಈ ರ್‍ಯಾಲಿ ಶಿಸ್ತಿನಿಂದ ಸಭೆಯ ಜಾಗಕ್ಕೆ ತಲುಪುವಂತೆ ಇಬ್ಬರು ಮುಫ್ತಿಯರು ಅದರ ಉಸ್ತುವಾರಿ ವಹಿಸಿದ್ದರು. ದೇವರ ದಯೆಯಿಂದ ರ್‍ಯಾಲಿ ಬಹಿರಂಗ ಸಭೆ ಸುಮಾರು 5-30ರವರೆಗೆ ನಡೆಯಿತು. ಆದರೆ ಬೆಳಗ್ಗೆಯಿಂದ ಹಸಿದು ದಣಿದುಕೊಂಡಿದ್ದ, ಉರಿಬಿಸಿಲಿನಲ್ಲಿ ಗಂಟೆ ಗಂಟೆಗಳ ಕಾಲ ನಡೆದುಬಂದ ಜನರ ಈ ಗುಂಪು ಸ್ವಲ್ಪವೂ ಚೆದುರಲಿಲ್ಲ. ಮೈದಾನ ಬಿಸಿಲಿನಿಂದ ಉರಿಯುತ್ತಿದ್ದರೂ ಸಹ ಕೊನೆಯವರೆಗೂ ಜನ ಅಲುಗಾಡಲಿಲ್ಲ. ಇದರಲ್ಲಿ ಪರೋಕ್ಷವಾಗಿ ದೈವಸಹಾಯವಿತ್ತು ಎಂದು ಸ್ಪಷ್ಟವಾಗಿ ತಿಳಿಯುತ್ತಿತ್ತು. ಕುರಾನಿನ ಪ್ರವಚನ ಹಾಗು ಪ್ರವಾದಿ (ಸ.ಅ.ಸ.)ರವರ ನಾತ್ ನಂತರ ಮೌಲಾನ ಮುಫ್ತಿ ಅಬ್ದುಲ್ ಅಜೀಜ್ ಸಾಹೇಬರು ಬೆಳಗಾಮಿನ ಸ್ವಾಗತ ಸಮಿತಿ ಪರವಾಗಿ ಭಾಷಣ ಓದುತ್ತ ''ನಾವು ಬೆಳಗಾಂ ನಾಗರೀಕರು ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್‌ನ ಈ ಪ್ರಯತ್ನವನ್ನು ಉಪಕಾರದ ದೃಷ್ಟಿಯಿಂದ ನೋಡುತ್ತ ಕೌನ್ಸಿಲ್‌ಗೆ ಭರವಸೆ ನೀಡುವುದೇನೆಂದರೆ-ತಮ್ಮ ಈ ಸಂವೇದನೆ, ಜನಸಮೂಹ ಹಾಗೂ ರಾಷ್ಟ್ರದಲ್ಲಿ ಏಕತೆಯ ಚಿಂತನೆ ಮೂಡಿಸುತ್ತಿರುವ ಪ್ರಯತ್ನ ದೈವ ಕೃಪೆಯಿಂದ ಪೂರ್ಣಗೊಳ್ಳುತ್ತದೆ. ಭಾರತದ ಮುಸ್ಲಿಂ ಸಮುದಾಯದ ಅಸ್ತವ್ಯಸ್ತತೆ, ಎಲ್ಲ ಕ್ಷೇತ್ರಗಳಲ್ಲಿ ಅವರ ಹಿಂದುಳಿದಿರುವಿಕೆ, ಇಂದು ನಮ್ಮ ಸಮುದಾಯದ ಪ್ರತಿಯೊಬ್ಬನೂ ಈ ಜವಾಬ್ದಾರಿಯನ್ನು ಅರಿತು ತನ್ನ ಧಾರ್ಮಿಕ ವ್ಯಕ್ತಿತ್ವ, ಹಾಗೂ ಸಭ್ಯತೆಯ ಪರಿಸರವನ್ನು ರಕ್ಷಿಸುತ್ತಾ ದೇಶದಲ್ಲಿ ಬೆಳೆಯುತ್ತಿರುವ ಧರ್ಮವಿರೋಧಿ ಚಟುವಟಿಕೆಗಳು, ಕೋಮುವಾರು ಅಸೂಯೆ, ಹಿಂಸೆ ಹಾಗೂ ದಬ್ಬಾಳಿಕೆಯನ್ನು ಬೇರು ಸಹಿತ ಕಿತ್ತುಹಾಕುವ ಸುಂದರ ಪುಣ್ಯ ಪ್ರಯತ್ನಗಳನ್ನು ನಾವು ಆದರಿಸುತ್ತೇವೆ. ಭಾರತದಲ್ಲಿ ಏಕತ್ವ ಮತ್ತು ಗುಂಪುಗಳ ಮಧ್ಯ ಸೌಹಾರ್ದತೆಯನ್ನು ಬಲಪಡಿಸುವ ನಿಮ್ಮ ಈ ಪ್ರಯತ್ನ ಸಫಲವಾಗುತ್ತದೆ'' ಎಂದರು. ಜನಾಬ್ ಇಬ್ರಾಹಿಂ ಖಲೀಲುಲ್ಲಾ ಖಾನ್ ಸಾಹೇಬರು ಮಾತನಾಡುತ್ತ ''ನಾವು ಬೆಳಗಾಂ ನಗರದ ಮುಸ್ಲಿಮರು ಹಾಗೂ ನಾಗರೀಕರಿಗೆ ಅದರಲ್ಲೂ ವಿಶೇಷವಾಗಿ ಯುವಕರಿಗೆ ವಂದನೆಗಳನ್ನು ಅರ್ಪಿಸುತ್ತೇವೆ. ಏಕೆಂದರೆ, ಈ ಉರಿಬಿಸಿಲಿನಲ್ಲೂ ಸಹ ತಾವು ಮಿಲ್ಲಿ ಕಾರವಾನನ್ನು ಅತಿ ಉತ್ಸಾಹದಿಂದ ಸ್ವಾಗತಿಸಿದ್ದೀರಿ. ಅಸಲಿನಲ್ಲಿ ನೀವು ನಿಮ್ಮ ವಿಶ್ವಾಸದ ಹುಮ್ಮಸ್ಸನ್ನು ಪ್ರಕಟಿಸಿದ್ದೀರಿ. ಏಕತೆ ಮತ್ತು ಸೌಹಾರ್ದತೆಯನ್ನು ಪ್ರಕಟಿಸಿದ್ದೀರಿ. ಈ ಹುಮ್ಮಸ್ಸು, ಈ ಪ್ರದರ್ಶನ ಸದಾ ಖಾಯಂಗೊಳಿಸಿ'' ಎಂದರು. ಜನಾಬ್ ಬಷೀರ್ ಅಹ್ಮದ್ ಅಡ್ವೊಕೇಟ್‌ರವರು ಮಾತನಾಡಿ ''ಕಳೆದುಹೋದ ದಿನ ಭೂತಪೂರ್ವ, ಬರುವಂತಹ ಕಾಲ ಭವಿಷ್ಯಕಾಲ, ಬಂದಿಲ್ಲದೇ ಇರುವುದು. ಅಂದರೆ ವರ್ತಮಾನ ನಮ್ಮದು. ಇಂದಿನ ಈ ದಿನ ನಮ್ಮ ಕೈಯಲ್ಲಿದೆ. ಇದರಲ್ಲೇ ನಾವು ನಮ್ಮ ಹಾಗೂ ದೇಶಬಾಂಧವರ ಚಿಂತನೆ ಮಾಡಲಾರಂಭಿಸಬೇಕಾಗಿದೆ. ವರ್ತಮಾನದ ಪ್ರಭಾವ ಭವಿಷ್ಯಕಾಲದ ಮೇಲೆ ಆಗುತ್ತದೆ, ದೇಶ ಬಾಂಧವರಲ್ಲಿ ಏಕತೆ

ಉಂಟಾಗುತ್ತದೆ'' ಎಂದರು. ಶ್ರೀ ಕೃಷ್ಣ ಮುಣಸಿರವರು ಮರಾಠಿಯಲ್ಲಿ ಮಾತನಾಡುತ್ತ ''ಇಂದು ಬೆಳಗಾಂ ನಗರದಲ್ಲಿ ನಾನು ಯಾವ ವಾತಾವರಣ ನೋಡುತ್ತಿದ್ದೇನೆಯೋ ಇದನ್ನು ನೋಡುವ ಆಸೆ ನನಗೆ ಅನೇಕ ವರ್ಷಗಳಿಂದ ಇತ್ತು. ಇದೇ ವಾತಾವರಣ ಸದಾ ಬೆಳಗಾಂನಲ್ಲಿದ್ದರೆ ಎಷ್ಟು ಒಳ್ಳೆಯದು. ನಾನು ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್‌ಗೆ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇನೆ. ಏಕೆಂದರೆ ಅವರ ಏಕತೆ ಮತ್ತು ಸೌಹಾರ್ದತಾ ಯಾತ್ರೆ ನಗರದಲ್ಲಿ ಇಂತಹ ವಾತಾವರಣ ಕಲ್ಪಿಸಿತು. ಮುಂದೆ ಇದನ್ನು ಬೆಳೆಸಿಕೊಂಡು ಹೋಗುವ ಕೆಲಸ ನಮ್ಮದು'' ಎಂದರು. ಈ ರಿಫಾಯಿ ಫಕೀರ್ ತಮ್ಮ ಉದ್ಘಾಟನೆಯ ಭಾಷಣದಲ್ಲಿ ಈ ದೇಶ ಔಲಿಯಾರವರ ದೇಶ. ಈ ದೇಶದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನಮ್ಮ ಔಲಿಯಾ ದಫನ್ ಆಗಿದ್ದಾರೆ. ಇವರೆಲ್ಲ ತಮ್ಮ ಜೀವನದಲ್ಲಿ ದೇಶಬಾಂಧವರೆಲ್ಲರನ್ನು ಮುತ್ತಿನ ಮಾಲೆ ಮಾಡಿಟ್ಟಿದ್ದರು. ಎಲ್ಲರನ್ನೂ ಪ್ರೀತಿ ಪ್ರೇಮದ ದಾರದಲ್ಲಿ ಕಟ್ಟಿದ್ದರು. ಇಂದು ಆ ಮಾಲೆ ಕಿತ್ತು ಹೋಗಿ ಮುತ್ತಿನ ಮಣಿಗಳು ಹರಡಿಕೊಂಡಿವೆ. ಅವುಗಳನ್ನು ಎತ್ತಿ ಸೇರಿಸಿ ಮತ್ತೆ ಆ ಮುತ್ತಿನ ಹಾರ ಮಾಡಬೇಕಾಗಿದೆ. ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ತನ್ನ ಏಕತೆ ಮತ್ತು ಸೌಹಾರ್ದತೆ ಯಾತ್ರೆಯಿಂದ ಈ ಕೆಲಸ ಮಾಡಲು ಪ್ರಯತ್ನಿಸುತ್ತ ಚಿಂತನೆ ಮಾಡುತ್ತಿದೆ. ನಾವೂ ಸಹ ಮಹನೀಯರ ಹಾಗೂ ಸೂಫಿಯಾರವರ ಈ ತತ್ವಗಳನ್ನು ಸ್ವೀಕರಿಸಿ ಮಾನವರ ಹೃದಯಗಳನ್ನು, ಅವರು ಯಾವುದೇ ಜಾತಿ ಧರ್ಮದವರೇ ಆಗಲಿ ಅವರ ಹೃದಯಗಳನ್ನು ನೋಯಿಸದ ಹಾಗೆ ನಡೆದುಕೊಳ್ಳಬೇಕು. ಮಹನೀಯರು ಹೇಳಿದಂತೆ ಹೃದಯ ಗೆಲ್ಲುವುದು ದೊಡ್ಡ ಹಜ್‌ಯಾತ್ರೆ ಮಾಡಿದ ಹಾಗೆ. ಹಾಗೆಯೇ ಹೃದಯ ಮುರಿಯುವಿಕೆ ದೊಡ್ಡ ಪಾಪ. ದೇಶವಾಸಿಗಳು ಅದರಲ್ಲೂ ಮುಸ್ಲಿಂ ಬಾಂಧವರು ವಿಶೇಷವಾಗಿ ಮಹನೀಯರ ಈ ಸದುಪದೇಶದ ಮೇಲೆ ನಡೆದುಕೊಂಡರೆ ಹಿಂದುಸ್ತಾನ ಮತ್ತೊಮ್ಮೆ ಸ್ವರ್ಗದಂತಾಗುತ್ತದೆ'' ಎಂದು ಹೇಳಿದರು. ಡಾ॥ ವಿಜಾನಸುದ್ದೀನ್ ಸಾಹೇಬರು ಆಂಗ್ಲ ಭಾಷೆಯಲ್ಲಿ ಮಾತನಾಡುತ್ತ ''ಇಂದಿನ ಅತಿ ಮುಖ್ಯವಾದ ಕೆಲಸವೆಂದರೆ ಏಕತೆ ಮತ್ತು ಸೌಹಾರ್ದತೆಯ ಕೆಲಸ. ದೇಶದಲ್ಲಿ ಏಕತೆ ಮತ್ತು ಸೌಹಾರ್ದತೆಯ ವಾತಾವರಣ ಬಂದುಬಿಟ್ಟರೆ ದೇಶ ಶಾಂತಿಯ ತೊಟ್ಟಿಲಾಗುತ್ತದೆ. ವಿಶ್ವದಲ್ಲೇ ಅದು ಹೆಸರು ಗಳಿಸುತ್ತದೆ. ಬನ್ನಿ, ನಾವೆಲ್ಲರೂ ಈ ಪುಣ್ಯಕಾರ್ಯಕ್ಕಾಗಿ ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಜೊತೆಗೂಡಿ ಅವರಿಗೆ ಸಹಾಯ ಮಾಡೋಣ. ಅಲ್ಲಾಹರವರು ಮಿಲ್ಲಿ ಕೌನ್ಸಿಲ್‌ನ ಈ ಎಲ್ಲ ಪ್ರಯತ್ನಗಳನ್ನು ಯಶಸ್ವಿಗೊಳಿಸಲಿ. ಅದರಲ್ಲೂ ವಿಶೇಷವಾಗಿ ಕರ್ನಾಟಕದಲ್ಲಿ ಹೊರಟಿರುವಂತಹ ಈ ಯಾತ್ರೆಯ ಪ್ರಯತ್ನವನ್ನು ಸ್ವೀಕರಿಸಲಿ '' ಎಂದರು. ಜನಾಬ್ ಸೈಯದ್ ಸೂಫಿ ಶಾಃ ಕಟಕರಿರವರು ಮಾತನಾಡಿ ''ನಾವೆಲ್ಲರೂ ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್‌ನ ಈ ಉಪಕಾರ ಮರೆಯಲು ಸಾಧ್ಯವಿಲ್ಲ. ಅವರು ಮಹನೀಯರ ರೀತಿ ನೀತಿಯನ್ನು ಸ್ವೀಕರಿಸಿ ಇಡೀ ದೇಶದಲ್ಲಿ ಯಾತ್ರೆ ಹೊರಡಿಸಿ ಅದನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಅಲ್ಲಾಃರು



ಇಷ್ಟಪಟ್ಟರೆ ಇದರ ಸುದ್ಧೆವ ಇಡೀ ದೇಶದ ಮೇಲೆ ಪರಿಣಾಮ ಬೀರುತ್ತದೆ'' ಎಂದರು. ಕಾರವಾನಿನ ಮುಖ್ಯಸ್ಥರಾದ ಮುಫ್ತಿ ಮುಹಮ್ಮದ್ ಅಶ್ರಫ್ ಅಲಿರವರು ಅಧ್ಯಕ್ಷರ ಭಾಷಣ ಮಾಡುತ್ತ ''ಮಿಲ್ಲಿ ಕೌನ್ಸಿಲ್‌ನ ಈ ಯಾತ್ರೆ ಇಸ್ಲಾಂ ಸಮುದಾಯವನ್ನು ಕಲಮ ಬುನಾದಿಯ ಮೇಲೆ ಒಟ್ಟುಗೂಡಿಸುವ ಪ್ರಯತ್ನ ಮಾಡುತ್ತ ದೇಶಬಾಂಧವರಲ್ಲಿ ಸೌಹಾರ್ದತೆಯನ್ನು ಬಯಸುತ್ತದೆ. ನಾನು ಮುಸ್ಲಿಂ ಬಾಂಧವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನೀವುಗಳು ಸಣ್ಣ ಸಣ್ಣ ಭೇದಭಾವಗಳನ್ನು ಮರೆತು ದೇಶವನ್ನು ಅರಾಜಕತೆ ಹಾಗೂ ಅಶಾಂತಿಯಿಂದ ಕಾಪಾಡಲು ಕರ್ಮಭೂಮಿಯಲ್ಲಿ ಬನ್ನಿ. ನಾನು ದೇಶ ಬಾಂಧವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಏಕತೆ ಮತ್ತು ಸೌಹಾರ್ದತೆಯನ್ನು ಪ್ರೋತ್ಸಾಹಿಸಿ. ದೇಶದಲ್ಲಿ ಶಾಂತಿ ಹಾಗೂ ಕಾನೂನಿನ ಮೇಲ್ಮೆಗಾಗಿ ಪ್ರಯ್ನತಿಸಿ'' ಎಂದರು. ಬೆಳಗಾಂ ರ್‍ಯಾಲಿ ಹಾಗೂ ಬಹಿರಂಗ ಸಭೆಯನ್ನು ಯಶಸ್ವಿಗೊಳಿಸಲು ಸ್ಥಳೀಯ ಸ್ವಾಗತ ಸಮಿತಿ ಹಾಗೂ ವಿಶೇಷವಾಗಿ ಜನಾಬ್ ಇಸ್‌ಹಾಖ್ ಮುಲ್ಲಾ ಸಾಹೇಬರು ಬಹಳ ಶ್ರಮಿಸಿದ್ದರು. ಅಲ್ಲಾಃ ಅವರಿಗೆ ಇದರ ಪುಣ್ಯ ಫಲನೀಡಲಿ, ಆಮೀನ್.

ಆಲ್ ಇಂಡಿಯಾ ಮಿಲ್ಲಿ ಕೌನ್ಸಿಲ್ ಕರ್ನಾಟಕದ ಈ ಯಾತ್ರೆ ನಾಲ್ಕು ದಿನ ರಾಜ್ಯದ ಆರು ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿತು. ಇದು ಯಾತ್ರೆಯ ಮೊದಲ ಹಂತ. ಇನ್ನೂ ಹದಿನಾಲ್ಕು ಜಿಲ್ಲೆಗಳಲ್ಲಿ ಯಾತ್ರೆ ಮೂರು ಹಂತಗಳಲ್ಲಿ ಹೊರಡಲಿದೆ. ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಯುವಕರು ಉಲೆಮಾ ಹಾಗೂ ಮಹನೀಯರ ಸೇವೆ ಸಲ್ಲಿಸಿದ್ದಾರೆ. ಪ್ರವಾಸದ ಸಮಯದಲ್ಲಿ ಸಮುದಾಯದ, ದೇಶ ಹಾಗೂ ಅಂತರರಾಷ್ಟ್ರೀಯ ಸ್ಥಿತಿಗಳ ಮೇಲೆ, ಧಾರ್ಮಿಕ ಸಮಸ್ಯೆಗಳ ಮೇಲೆ ಚರ್ಚೆ ನಡೆಯುತ್ತಿತ್ತು. ಇದರಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಲಾಭವಾಯಿತು. ಜನಾಬ್ ಇಬ್ರಾಹೀಂ ಖಲೀಲುಲ್ಲಾ ಖಾನ್ ಸಾಹೇಬರು ಸಮಯಕ್ಕೆ ಸರಿಯಾಗಿ ಅದಕ್ಕೆ ತಕ್ಕಂತಹ ಕವನಗಳನ್ನು ಹೇಳುತ್ತಿದ್ದರು . ಇದರಿಂದ ಒಂದು ಒಳ್ಳೆಯ ವಾತಾವರಣ ಮೂಡುತ್ತಿತ್ತು . ದೈವಕೃಪೆಯಿಂದ ಹಜ್‌ರತ್ ಮೌಲಾನ ಮುಫ್ತಿ ಮುಹಮ್ಮದ್ ಅಶ್ರಫ್ ಅಲಿರವರ ನೇತೃತ್ವದಲ್ಲಿ ಈ ಯಾತ್ರೆ ಯಶಸ್ವಿಯಾಗಿ, ಸುರಕ್ಷಿತವಾಗಿ ಬೆಂಗಳೂರಿಗೆ ಹಿಂದಿರುಗಿತು.



ತುಮಕೂರಿನಲ್ಲಿ ಯಾತ್ರೆಯ ಸ್ವಾಗತದ ಒಂದು ದೃಶ್ಯ



ದಾವಣಗೆರೆ ರ್‍ಯಾಲಿಯ ಒಂದು ದೃಶ್ಯ



ಬೆಳಗಾಂ ರ್‍ಯಾಲಿಯ ಒಂದು ದೃಶ್ಯ : ಇದು ನಾಲ್ಕು ಕಿ.ಮೀ. ಉದ್ದದ ರ್‍ಯಾಲಿ